MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಜ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 212 | ಶುಕ್ರವಾರ : 06-06-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 212 | FRIDAY : 06-06-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಕಾಲ್ತುಳಿತ ಕಣ್ಣಾರೆ ಕಂಡ ಚಂದನ್‌ಶೆಟ್ಟಿ



**ಬೆಂಗಳೂರು,ಜೂ.5–**ಆರ್‌ಸಿಬಿಯ ವಿಜಯೋತ್ಸವದ ಸಂದರ್ಭದಲ್ಲಿ 11 ಜನರ ಸಾವಿಗೆ ಕಾರಣವಾದ ಕಾಲ್ತುಳಿತದ ಬಗ್ಗೆ ಮಾತನಾಡಿ ನನ್ನ ಬಳಿ ಗೇಟ್ ಸಂಖ್ಯೆ 3 ಕ್ಕೆ ಹೋಗಲು ಪಾಸ್ ಇತ್ತು. ಗೇಟ್ ಸಂಖ್ಯೆ 3 ತಲುಪಲು ನನಗೆ ಸಮಯವಿರಲಿಲ್ಲ, ಅಷ್ಟೊಂದು ಜನರು ಜಮಾಯಿಸಿದ್ದರು. ನಾನು ಗೇಟ್ ಸಂಖ್ಯೆ 10 ಕ್ಕೆ ಹೋದೆ, ಮತ್ತು ಅಲ್ಲಿ ತುಂಬಾ ಜನರು ಸೇರಿದ್ದರು. ಜನಸಂದಣಿಯಲ್ಲಿ ಸಿಲುಕಿಕೊಂಡ ನಂತರ ನನಗೆ ಉಸಿರಾಟದ ತೊಂದರೆ ಉಂಟಾಯಿತ್ತು ಎಂದು ಹೇಳಿದ್ದಾರೆ.

## ರಾಯಚೂರ ಕೋಟೆ ಹತ್ತಿರದ
## ರಾಜಕಾಲುವೆಯ ದುರಸ್ಥಿ ಕಾರ್ಯದ ಪರಿಶೀಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜೂನ್.5–** ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಜೂನ್ 5ರಂದು ಸಂಜೆ ರಾಯಚೂರ ನಗರದ ಕೋಟೆ ಹತ್ತಿರದ ರಾಜಕಾಲುವೆ ಪ್ರದೇಶಕ್ಕೆ ಭೇಟಿ ನೀಡಿ ಕಾಲುವೆಯ ದುರಸ್ಥಿ ಕಾರ್ಯದ ವೀಕ್ಷಣೆ ನಡೆಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ಪಾಂಡ್ವೆ, ರಾಯಚೂರ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಾಪತ್ರ ಅವರೊಂದಿಗೆ ರಾಜಕಾಲುವೆಯ ಸ್ಥಳಕ್ಕೆ ಭೇಟಿ ನೀಡಿ, ಜೆಸಿಬಿಗಳಿಂದ ನಡೆದ ಕಾಲುವೆಯ ಸ್ವಚ್ಚತಾ ಕಾರ್ಯವನ್ನು ಪರಿಶೀಲಿಸಿದರು.

ಕಾಲುವೆಯ ಸ್ವಚ್ಛತಾ ಕಾರ್ಯವು ಈಗ ಆರಂಬವಾಗಿದ್ದರಿಂದಾಗಿ ರಾಯಚೂರ ನಿಗರದ ನಿವಾಸಿಗಳಿಗೆ ಸಂತಸ





ತಂದಿದೆ. ಈ ಕಾಲುವೆಯ ಸ್ವಚ್ಛತಾ ಕಾರ್ಯವು ವೈಜ್ಞಾನಿಕ ರೀತಿಯಲ್ಲಿ ಆಗಬೇಕು. ಇಲ್ಲಿ ಮತ್ತೆ ಗಲೀಜು ಸೇರಿದಂತೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಮಾಜ ಸೇವಕರಾದ ಮೋಸಿನ್ ಖಾನ್ ಅವರು ಇದೆ ವೇಳೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಈಗ ಜೆಸಿಬಿಗಳಿಂದ ಕಸ ಎತ್ತು ಹಾಕಿ ಸರಿಪಡಿಸುತ್ತಿರುವುದು ಸರಿ ಇದೆ. ಬಹುವರ್ಷಗಳ ನಂತರ ಈ ಕೆಲಸ ಆರಂಭವಾಗಿದ್ದು ಕಂಡು ನಮಗೆ ಬಹಳಷ್ಟು ಖುಷಿ ಆಗಿದೆ. ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆಯು ರಾಯಚೂರ ನಗರದ ಜನರು ಹೆಮ್ಮೆ ಪಡುವಂತಹ ಕೆಲಸ ಮಾಡುತ್ತಿದೆ. ಈ ರೀತಿ ಕಸವನ್ನು ಎತ್ತುವ ಕಾರ್ಯ ಮತ್ತೆ ಮತ್ತೆ ಆಗದಂತೆ ಮತ್ತೆ ಮತ್ತೆ ಕಸ ತುಂಬದ ಹಾಗೆ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಈ ರಾಜಕಾಲುವೆಯ ದುರಸ್ತಿ ಮತ್ತು ಕಾಲುವೆಯನ್ನು ಸರಿಪಡಿಸುವ ಕಾರ್ಯ ನಡೆಯಬೇಕು. ಇಡೀ ರಾಜ್ಯಕ್ಕೆ ಮಾದರಿಯಾಗುವ ಹಾಗೆ ಈ ಕಾಲುವೆಯನ್ನು ವಿನೂತನ ರೀತಿಯಲ್ಲಿ 2ನೇ ಪುಟಕ್ಕೆ

## ಒಣ ಮೆಣಸಿನಕಾಯಿ ಬೆಳೆಗೆ ಕರ್ನಾಟಕ
## ಸರ್ಕಾರದಿಂದ ಬೆಂಬಲ ಬೆಲೆ ಘೋಷಣೆ

**ಯುವ ಮಾರ್ಗ ಸುದ್ದಿ**



**ರಾಯಚೂರು,ಜೂ.5–**ಕರ್ನಾಟಕ ರಾಜ್ಯದ ಒಣ ಮೆಣಸಿನಕಾಯಿ ಬೆಳೆಗಾರರ ದೀರ್ಘಕಾಲದ ಬೇಡಿಕೆಗೆ ಕೊನೆಗೂ ಕರ್ನಾಟಕ ಸರ್ಕಾರ ಸ್ಪಂದಿಸಿದ್ದು, 2024–25ನೇ ಹಂಗಾಮಿನಲ್ಲಿ ಕೆಂಪು ಮೆಣಸಿನಕಾಯಿಗೆ ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯ (ಕಆಕಖ) ಅಡಿಯಲ್ಲಿ ಪ್ರತಿ ಕ್ವಿಂಟಲ್‌ಗೆ ?10,589.20 ಬೆಂಬಲ ಬೆಲೆ ನಿಗದಿಪಡಿಸಿ ಅನುಮೋದನೆ ನೀಡಿದೆ. ಈ ಕುರಿತು ರಾಯಚೂರು–ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ.ಕುಮಾರ ನಾಯಕ ಅವರು ಮಾಧ್ಯಮಗಳಿಗೆ ಸಂತಸದಿಂದ ಮಾಹಿತಿ ನೀಡಿದ್ದಾರೆ.

ಮೆಣಸಿನಕಾಯಿ ಬೆಳೆಗಾರರು ಎದುರಿಸುತ್ತಿರುವ ಬೆಲೆ ಕುಸಿತ, ನಿಗದಿತ ಮಾರುಕಟ್ಟೆಯ ಕೊರತೆ, ಮತ್ತು ಅದರ ಸಂಗ್ರಹಣೆಗೆ ಸಂಬಂಧಿಸಿದ ಸಮಸ್ಯೆಗಳು, ವಿಶೇಷವಾಗಿ ರಾಯಚೂರಿನಂತಹ ಅತಿ ಹೆಚ್ಚು ಮೆಣಸಿನಕಾಯಿ ಬೆಳೆಯುವ ಪ್ರದೇಶಗಳಲ್ಲಿನ ಮಾರುಕಟ್ಟೆ ಸಮಸ್ಯೆಗಳನ್ನು ಸಂಸದ ಜಿ. ಕುಮಾರ ನಾಯಕ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗಮನಕ್ಕೆ ತಂದಿದ್ದರು.

ಮೊದಲಿಗೆ, ಕರ್ನಾಟಕ ಸರ್ಕಾರದ ಕೃಷಿ ಮಾರುಕಟ್ಟೆ ಮತ್ತು ಜವಳಿ ಸಚಿವ ಶಿವಾನಂದ್ ಪಾಟೀಲ್ ಹಾಗೂ ಸಣ್ಣ ನೀರಾವರಿ ಇಲಾಖೆಯ ಸಚಿವ ಎನ್.ಎಸ್.ಭೋಸರಾಜು ಅವರನ್ನು ಸಂಸದ ನಾಯಕ ಅವರು ಭೇಟಿಯಾಗಿ ಮೆಣಸಿನಕಾಯಿ ಬೆಳೆಗಾರರ ಸಮಸ್ಯೆಗಳನ್ನು ವಿವರಿಸಿದರು. ಇದರ ನಂತರ, ಅವರು ಭಾರತ ಸರ್ಕಾರದ ಕೃಷಿ ಸಚಿವಾಲಯದ ಕಾರ್ಯದರ್ಶಿಗಳಾದ ಡಾ. ದೇವೇಶ್ ಚತುರ್ವೇದಿ ಅವರನ್ನು ಭೇಟಿಯಾಗಿ, ಕರ್ನಾಟಕ ರಾಜ್ಯದಲ್ಲಿ ಒಣ ಮೆಣಸಿನಕಾಯಿ ಬೆಳೆಗಾರರು ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಮನವರಿಕೆ ಮಾಡಿಕೊಟ್ಟರು. ಈ ನಿರಂತರ ಪ್ರಯತ್ನಗಳ ಫಲವಾಗಿ, ಕೇಂದ್ರ ಸರ್ಕಾರವು ಮೆಣಸಿನಕಾಯಿ ಬೆಳೆಗೆ ಬೆಂಬಲ ಬೆಲೆ ನೀಡುವುದಾಗಿ ಆದೇಶವನ್ನು ಹೊರಡಿಸಿತ್ತು.

ಮೆಣಸಿನಕಾಯಿ ಬೆಳೆಗಾರರ ಸಂಕಷ್ಟವನ್ನು ಕರ್ನಾಟಕ ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಇದೀಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಬಂಧಿತ ಇಲಾಖೆಗಳ ಮೂಲಕ ಅಧಿಕೃತ ಅಧಿಸೂಚನೆಯನ್ನು ಹೊರಡಿಸಿವೆ.ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಗಳಲ್ಲಿ ರೈತರಿಗೆ ಅಗತ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಬೇಕು ಮತ್ತು ಅನುಷ್ಠಾನದಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಸಂಸದ ಜಿ.ಕುಮಾರ ನಾಯಕ ತಿಳಿಸಿದ್ದಾರೆ. ಸರ್ಕಾರದ ಈ ನಿರ್ಧಾರವು ರಾಜ್ಯದ ಒಣ ಮೆಣಸಿನಕಾಯಿ ಬೆಳೆಗಾರರಲ್ಲಿ ಆಶಾಭಾವ ಮೂಡಿಸಿದೆ.

## ಆರ್‌ಸಿಬಿ ವಿಜಯೋತ್ಸವ ದುರಂತ
## ಸರ್ಕಾರಕ್ಕೆ ಹೈಕೋರ್ಟ್ ತರಾಟೆ

**ಬೆಂಗಳೂರು, ಜೂನ್ 05–** ಸಿದ್ಧತೆ ಮಾಡಿಕೊಳ್ಳದೆ ಸರ್ಕಾರ ಕಾರ್ಯಾಕ್ರಮ ಆಯೋಜನೆಗೆ ರಾಜ್ಯ ಹೈಕೋರ್ಟ್ ತರಾಟೆಗೆ ತೆಗೆದುಕೊಂಡು ಹಲವು ಪ್ರಶ್ನೆಗಳನ್ನು ಕೇಳಿದೆ. ಇಂತಹ ಘಟನೆ ತಡೆಗೆ ಎಸ್‌ಪಿ ಇರಬೇಕಲ್ಲವೇ. ವೈದ್ಯಕೀಯ ಸಿಬ್ಬಂದಿ, ಅಂಬುಲೆನ್ಸ್ ವ್ಯವಸ್ಥೆ ಇರಬೇಕಲ್ಲವೇ? ಎಂದು ಸರ್ಕಾರಕ್ಕೆ ಹಂಗಾಮಿ ಸಿಜೆ ವಿ.ಕಾಮೇಶ್ವರ ರಾವ್ ನೇತೃತ್ವದ ಪೀಠ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿದೆ. ಕಾಲ್ತುಳಿತವಾದಾಗ ಏನು ಮಾಡಬೇಕೆಂಬ ಬಗ್ಗೆ ಸಿದ್ಧ ಇರಬೇಕಲ್ಲವೇ? ಗಾಯಗೊಂಡವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸಬೇಕಲ್ಲವೇ? ಇಂತಹ ಮಾರ್ಗಸೂಚಿ ಏನಾದರೂ ಪಾಲಿಸಿದ್ದೀರಾ ಎಂದು ಯೋಜನೆಯಡವಟ್ಟಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.ಕರ್ನಾಟಕ ಹೈಕೋರ್ಟ್ ಸ್ವಯಂಪ್ರೇರಿತವಾಗಿ ಪಿಐಎಲ್ ದಾಖಲಿಸಿಕೊಂಡು ಇಂದು ಮಧ್ಯಾಹ್ನ



ವಿಚಾರಣೆ ನಡೆಸಿ ಸರ್ಕಾರಕ್ಕೆ ಚಾಟಿ ಬೀಸಿದೆ.

ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ ಹೈಕೋರ್ಟ್ ನೀಡುವ ಸಲಹೆಗಳನ್ನು ಪಾಲಿಸಲು ಸರ್ಕಾರ ಬದ್ಧವಾಗಿದೆ. ನಾವು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನುಪ್ರತಿರೋಧಿಸುವುದಿಲ್ಲ ಎಂದು ಹೇಳಿದರು. ಜೂನ್ 3ರಂದು ಆರ್‌ಸಿಬಿ ಐಪಿಎಲ್ ಮ್ಯಾಚ್ ಗೆಲುವು ಸಾಧಿಸಿತು. ಭದ್ರತೆಗಾಗಿ ಬೆಂಗಳೂರು ಪೊಲೀಸರು ಸಿದ್ಧತೆ ನಡೆಸಿದ್ದರು. ಬಂದೋಬಸ್ತ್ ಗಾಗಿ 1,643 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ವಾಟರ್ ಟ್ಯಾಂಕರ್,ಕೆಎಸ್‌ಆರ್‌ಪಿ ತುಕಡಿ ಸೇರಿದಂತೆ ಹಲವು ವ್ಯವಸ್ಥೆ ಮಾಡಲಾಗಿತ್ತು.

ನಿನ್ನೆ ಕೂಡ 1,600 ಪೊಲೀಸ್ ಸಿಬ್ಬಂದಿ ನೇಮಿಸಲಾಗಿತ್ತು ಎಂದು ವಾದದಲ್ಲಿ ತಿಳಿಸಿದ್ದಾರೆ. ಕಾಲ್ತುಳಿತ ಸಂಭವಿಸಿ 56 ಜನರು ಗಾಯಗೊಂಡಿದ್ದರು ಅದರಲ್ಲಿ ಐವರು ಮಹಿಳೆಯರು ಹಾಗೂ 6 ಪುರುಷರು ಮೃತಪಟ್ಟಿದ್ದಾರೆ. ಕೋಲಾರ, ಉತ್ತರ ಕನ್ನಡ, ತುಮಕೂರು, ಯಾದಗಿರಿ, ಮಂಡ್ಯದಿಂದಲೂ ಬೆಂಗಳೂರಿಗೆ ಜನ ಬಂದಿದ್ದರು. ಒಟ್ಟು ನಿನ್ನೆ ಬೆಂಗಳೂರಿಗೆ 2.5 ಲಕ್ಷ ಜನರು 2ನೇ ಪುಟಕ್ಕೆ

## ನರೇಗಾ ಯೋಜನೆಯ ಪರಿಣಾಮಕಾರಿ
## ಅನುಷ್ಠಾನಕ್ಕೆ ಕ್ರಮವಹಿಸಿ: ರಾಹುಲ್ ಪಾಂಡ್ವೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜೂ.5–**ಜನರಿಗೆ ಅತ್ಯುಪಯುಕ್ತವಾದ ನರೇಗಾ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತು ಕೊಡಬೇಕು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿ, ಕಾರ್ಯನಿರ್ವಹಣೆಯಲ್ಲಿ ವಿಫಲರಾದಲ್ಲಿ ಅಂತವರ ವಿರುದ್ಧ ತಾಲ್ಲೂಕು ಅಡ್–ಹಾಕ್ ಸಮಿತಿಗಳು ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಅವರು ಹೇಳಿದರು.



ರಾಯಚೂರು ಜಿಲ್ಲಾ ಪಂಚಾಯತ್ ಕಚೇರಿಯ ಸಭಾ ಭವನದಲ್ಲಿ ನಡೆದ ನರೇಗಾ ಯೋಜನೆಯ ಅಡ್–ಹಾಕ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರತಿ ತಾಲ್ಲೂಕಿನಲ್ಲಿ ಅಡ್ ಹಾಕ್ ಸಮಿತಿಯು ಸದಸ್ಯರೊಂದಿಗೆ ಚರ್ಚಿಸಿ ಪ್ರಕರಣಗಳನ್ನು ಯಾವ ರೀತಿ ತಿರುವಳಿಗೊಳಿಸುತ್ತಾರೆ ಎಂಬುದರ ಬಗ್ಗೆ ದಾಖಲೆಗಳೊಂದಿಗೆ ಪರಿಶೀಲಿಸಿ, ಪ್ರಕರಣಗಳ ವಿವರ ಪಡೆದು ವಸೂಲಾತಿ ಮಾಡಬೇಕಾದ ಮೊತ್ತವನ್ನು ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಯಿಂದ ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿಸಬೇಕು. ಅಡ್ –ಹಾಕ್ ಸಮಿತಿಯ ಸಭೆಯನ್ನು ಪ್ರತಿ ತಾಲೂಕಿನಲ್ಲಿ ಕಡ್ಡಾಯವಾಗಿ ನಿಯಮಿತವಾಗಿ ಆಯೋಜಿಸಿ ಪ್ರಕರಣಗಳನ್ನು ನಿಯಮಾನುಸಾರ ತಿರುವಳಿಗೊಳಿಸಬೇಕು. ಜಿಲ್ಲೆಯಲ್ಲಿ ಒಟ್ಟು 558 ಪ್ರಕರಣಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಎಟಿಆರನಲ್ಲಿ ಅಳವಡಿಸಿ ಅಗತ್ಯ ಕ್ರಮ ಜರುಗಿಸಲು ಸಿಇಓ ಅವರು ಸೂಚಿಸಿದರು.

ಈಗಾಗಲೇ ಮಳೆಗಾಲ ಪ್ರಾರಂಭವಾಗಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಶುದ್ಧ ಕುಡಿಯುವ ನೀರಿನ ಘಟಕಗಳು ಚಾಲ್ತಿಯಲ್ಲಿರಬೇಕು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ

ದುರಸ್ಥಿ ಅಗತ್ಯವಿದೆ ಎಂದು ಕಂಡು ಬಂದಲ್ಲಿ ಕೂಡಲೇ 2ನೇ ಪುಟಕ್ಕೆ

## ಪರಿಸರ ರಕ್ಷಣೆ ನಮ್ಮೆಲ್ಲರ
## ಹೊಣೆ : ಆರ್ ಗುರುನಾಥ



**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜೂ.5–**ಪರಿಸರವನ್ನು ಪ್ರತಿಯೊಬ್ಬರು ಕಾಪಾಡಬೇಕಿದೆ ಪರಿಸರವನ್ನು ಉಳಿಸಿ ಬೆಳೆಸುವ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದ ಜಿಲ್ಲಾ ಅದ್ಯಕ್ಷ ಆರ್ ಗುರುನಾಥ ಅಭಿಪ್ರಾಯಪಟ್ಟರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರ ಉಳಿಸಿ ಪರಿಸರ ಬೆಳೆಸಿ ಮನುಕುಲ ಹಾಗೂ ಪ್ರಕೃತಿಯಲ್ಲಿರುವ ಜೀವಸಂಕುಲ ನೆಮ್ಮದಿಯಿಂದ ಜೀವಿಸಲು ಹಾಗೂ ನಮ್ಮ ನಾಡು ನಮ್ಮ ದೇಶ ಹಚ್ಚ ಹಸಿರಿನಿಂದ ಕೂಡಿರಲು ತಾವೆಲ್ಲರು ಸಹಕರಿಸಬೇಕು. ಪ್ರತಿಯೊಬ್ಬರು ಪ್ರಕೃತಿಯನ್ನು ಪ್ರೀತಿಸಿ ಹಾಗೂ ಒಬ್ಬೊಬ್ಬರು ಒಂದೊಂದು ಸಸಿ ನೆಡಬೇಕು, 2ನೇ ಪುಟಕ್ಕೆ

## ಕಲ್ಲೂರಿನಲ್ಲಿ ವಿಕಸಿತ ಕೃಷಿ
## ಸಂಕಲ್ಪ ಅಭಿಯಾನ–2025

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.5–** ತಾಲೂಕಿನ ಕಲ್ಲೂರು ಗ್ರಾಮದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಹಾಗೂ ಕಲ್ಲೂರು ರೈತ ಸಂಪರ್ಕ ಕೇಂದ್ರ ಹಾಗೂ ಕೃಷಿ ಹಾಗೂ ಕೃಷಿ ಸಂಬಂದಿತ ಅಭಿವೃದ್ದಿ ಇಲಾಖೆಗಳ ಸಹಯೋಗದಲ್ಲಿ ನಡೆದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ–2025 ಕಾರ್ಯಕ್ರಮಕ್ಕೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮುಖ್ಯಸ್ಥರಾದ ಡಾ.ತಿಮ್ಮಣ್ಣ ನಾಯಕ ಚಾಲನೆ ನೀಡಿ ಮಾತನಾಡಿ ರೈತರು ಹೆಚ್ಚಾಗಿ ಬೆಳೆಗಳನ್ನು ಬೆಳೆಯುವುದಕ್ಕೆಚ ರಾಸಾಯನಿಕ ಗೋಬ್ಬರಗಳನ್ನು ಹಾಗೂ ಕೀಟನಾಶಕಗಳನ್ನು



ಬಳಸುತ್ತಿರುವುದರಿಂದ ಪರಿಸರಕ್ಕೆ ಹಾಗೂ ಮಾನವರ ಆರೋಗ್ಯದ ಮೇಲೆ ಗಂಭಿರವಾದ ಪರಿಣಾಮವಾಗುತ್ತಿದೆ ಅದ್ದರಿಂದ ಪರಿಸರ ಸ್ನೇಹಿ, ಜೈವಿಕ ಗೊಬ್ಬರಗಳು ಮತ್ತು ಕೀಟನಾಶಕಗಳಾದ ಪಂಚಗವ್ಯ, ಬೀಜಾಮೃತ, ಜೀವಾಮೃತ, ದಶಪರಣಿ ಕಷಾಯ, ಎರೆಹುಳು ಗೊಬ್ಬರ ಬಳಸಿ ತಮ್ಮ ಜಮೀನಿನ ಶೇಕಡ 25% ರಷ್ಟು ಭೂಮಿಯಲ್ಲಿ ಸಾವಯವ ಕೃಷಿ ಪದ್ಧತಿ ಅನುಸರಿಸುವುದರಿಂದ ರಾಸಾಯನಿಕ ಮೂಕ್ತವಾದ ಆರೋಗ್ಯವಂತ ಕೃಷಿ ಉತ್ಪನ್ನಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ವತಿಯಿಂದ ಬೆವೆರಿಯ, ಮೆಟರೈಝಿಂ, ವರ್ಟಿಸೆಲಿಯಮ್, ಜೈವಿಕ ಪೀಡೆನಾಶಕಗಳನ್ನು ಬಳಸಿ ಮೆಣಸಿನಕಾಯಿಯಲ್ಲಿ ಬರುವ ಬ್ಲಾಕ್ ಥ್ರೀಪ್ಸ್ ನುಸಿಯನ್ನು ನಿಯಂತ್ರಿಸಬಹುದೆಂದು ತಿಳಿಸಿದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಕೃಷಿ ವಿಜ್ಞಾನಿ ಡಾ. ಶ್ರೀವಾಣಿ ಜಿ.ಎನ್ ಮಾತನಾಡಿ, ಹತ್ತಿಯಲ್ಲಿ ಗುಲಾಬಿ ಕಾಯಿಕೊರಕದ ಬಾದೆಯಿಂದ ರೈತರಿಗೆ ಗುಣಮಟ್ಟದ ಹತ್ತಿ ದೊರೆಯುವುದಿಲ್ಲ ಅದ್ದರಿಂದ ರೈತರು ಹತ್ತಿಬೆಳೆಯ ರೆಂಬೆಯ ಹತ್ತಿರ ಕ್ರಿಮೇಟ್ ಎಂಬ ಪೇಸ್ಟ್ಟು ಹಚ್ಚುವುದರಿಂದ ಗುಲಾಬಿ ಕಾಯಿ ಕೋರಕದ ಗಂಡು ಪತಂಗಗಳನ್ನು ಆಕರ್ಷಿಸಿ ಹೆಚ್ಚಿನ ನಷ್ಟವಾಗದಂತೆ ತಡೆಯವುದಕ್ಕೆ ಸಾಧ್ಯವಾಗುತ್ತದೆ ತೊಗರಿಯಲ್ಲಿ ಕುಡಿ ಚಿವುಟುವು 2ನೇ ಪುಟಕ್ಕೆ

## ಮೊದಲನೇಯ ಪುಟದಿಂದ

# ರಾಜಕಾಲುವೆಯ ದುರಸ್ಥಿ ಕಾರ್ಯದ ಪರಿಶೀಲನೆ

ಸರಿಪಡಿಸುವ ಕಾರ್ಯ ಆಗಬೇಕು ಎಂದು ಸಾರ್ವಜನಿಕರು ಇದೆ ವೇಳೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು. ನಗರದ ಹೃದಯಭಾಗದ ಜನನಿಬಿಡ ಪ್ರದೇಶದಲ್ಲಿನ ಕೋಟೆ ಪಕ್ಕದಲ್ಲಿದ್ದ ಈ ರಾಜಕಾಲುವೆಯ ಸ್ಥಿತಿಯಿಂದ ರಾಯಚೂರ ನಗರದ ನಿವಾಸಿಗಳಿಗೆ ಸಾಕಷ್ಟು ಕಿರಿಕಿರಿಯಾಗಿತ್ತು. ರಾಯಚೂರ ನಗರವನ್ನು ಪ್ರವೇಶಿಸುವ ಜನತೆಯು ಸಹ ಕಾಲುವೆಯನ್ನು ಕಂಡು ಬೇಸರ ವ್ಯಕ್ತಪಡಿಸುವ ದುಸ್ಥಿತಿಯಿತ್ತು. ಈಗಾಗಲೇ ಕೆಲವು ದಿನಗಳಿಂದ ನಿರಂತರವಾಗಿ ಈ ಕಾಲುವೆಯ ದುರಸ್ಥಿ ಕಾರ್ಯ ನಡೆದಿದೆ. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಇದೆ ವೇಳೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ರಾಜಕಾಲುವೆಗೆ ಇನ್ಮೇಲೆ ಯಾರು ಸಹ ಕಸವನ್ನು ಎಸೆಯದಂತೆ ವೈಜ್ಞಾನಿಕ ರೀತಿಯಲ್ಲಿ ಕಾಲುವೆಯ ಶುಚಿತ್ವಕ್ಕೆ ಕ್ರಮ ವಹಿಸಲಾಗುವುದು ಎಂದು ಇದೆ ವೇಳೆ ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದರು.

# ಆರ್‌ಸಿಬಿ ವಿಜಯೋತ್ಸವ ದುರಂತ ಸರ್ಕಾರಕ್ಕೆ ಹೈಕೋರ್ಟ್ ತರಾಟೆ

ಬಂದಿದ್ದರು ಎಂದು ಕೋರ್ಟ್‌ಗೆ ತಿಳಿಸಿದರು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 34,600 ಜನರಿಗಷ್ಟೇ ವ್ಯವಸ್ಥೆ ಇದೆ. 33 ಸಾವಿರ ಜನರಿಗಷ್ಟೇ ಟಿಕೆಟ್ ನೀಡುತ್ತಾರೆ. ಆದರೆ ನಿನ್ನೆ ಎರಡೂವರೆ ಲಕ್ಷ ಜನರು ಬಂದಿದ್ದರು ಎಂದರು.ಇಂತಹ ದೊಡ್ಡ ಕಾರ್ಯಕ್ರಮ ನಡೆದಾಗ ಪೂರ್ವ ಸಿದ್ದತೆ ಏನಿತ್ತು0ಬಬ ಪೀಠದ ಪ್ರಶ್ನೆಗೆ ಎಜಿ ಅವರು, ರಾಯಲ್ ಚಾಲೆಂಜರ್ಸ್ ಟಿಕೆಟ್ ಹಂಚಿಕೆ ಮಾಡುತ್ತದೆ. ಸ್ಟೇಡಿಯಂನ ಎಲ್ಲಾ ವ್ಯವಸ್ಥೆ ಅವರೇ ಮಾಡುತ್ತಾರೆ.

ಬೆಂಗಳೂರಿನೆಲ್ಲೆಡೆ ಬೆಳಗಿನ ಜಾವ 4 ಗಂಟೆಯಿಂದಲೇ ಜನ ಬರುತ್ತಿದ್ದರು. 3 ಗಂಟೆಯೊಳಗೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಜನದಟ್ಟಣೆಯಾಗಿತ್ತು. ರಾಜ್ಯವಲ್ಲದೇ ಅನ್ಯ ರಾಜ್ಯದಿಂದಲೂ ಜನ ಬಂದಿದ್ದರು ಎಂದು ಮಾಹಿತಿ ನೀಡಿದರು. ವಕೀಲ ಅರುಣ್ ಶ್ಯಾಮ್ ವಾದ ಮಂಡಿದಿ ಆರ್‌ಸಿಬಿ ಆಟಗಾರರು ರಾಜ್ಯ, ದೇಶಕ್ಕೆ ಆಡುತ್ತಿಲ್ಲ. ರಾಜ್ಯ ಸರ್ಕಾರ ಇವರನ್ನು ಗೌರವಿಸುವ ಅಗತ್ಯವಿರಲಿಲ್ಲ ವಿಧಾನಸೌಧ, ಚಿನ್ನಸ್ವಾಮಿ ಸ್ಟೇಡಿಯಂ ಎರಡೂ ಕಡೆ ಕಾರ್ಯಕ್ರಮ ಮಾಡಲಾಗಿದೆ. ಇದರಿಂದ ಸಮಸ್ಯೆಯಾಗಿದೆ. ಎರಡು ಕಡೆ ಸಮಾರಂಭ ಮಾಡಿದ್ದಾರೆ. ಎಲ್ಲೆಲ್ಲಿ ಅಂಬುಲೆನ್ಸ್ ಇತ್ತು, ಎಷ್ಟು ಭದ್ರತೆ ಇತ್ತು? ಸರ್ಕಾರ ಇದನ್ನು ಸ್ಪಷ್ಟಪಡಿಸಬೇಕು. ತನಿಖೆ ನಡೆಸಬೇಕು ಎಂದು ಹಿರಿಯ ವಕೀಲ ಅರುಣ್ ಶ್ಯಾಮ್ ಮನವಿ ಮಾಡಿದರು. ಇದಕ್ಕೆ ಹೈಕೋರ್ಟ್ ಪ್ರತಿಕ್ರಿಯಿಸಿ, ನಾವು ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡಿದ್ದೇವೆ ಎಂದು ಸ್ಪಷ್ಟನೆ ನೀಡಿತು.

# ನರೇಗಾ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮವಹಿಸಿ: ರಾಹುಲ್ ಪಾಂಡ್ವೆ

ಕ್ರಮವಹಿಸಬೇಕು ಎಂದ ಸಿಇಓ ಅವರು, ಮಳೆಗಾಲದಲ್ಲಿ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಹಾಗೂ ನೈರ್ಮಲ್ಯ ಕಾಪಾಡಲು ಪಿಡಿಓ ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ನೀರು ಕಲುಷಿತವಾಗದಂತೆ ಪ್ರತಿ ಗ್ರಾಮದಲ್ಲಿ ಮುಜಾಗ್ರತಾ ಕ್ರಮಗಳಾದ ಸ್ವಚ್ಛತೆ ಸೇರಿದಂತೆ ಇನ್ನಿತರ ಹೆಚ್ಚಿನ ಕಾಳಜಿ ವಹಿಸಬೇಕೆಂದು ಸಿಇಓ ಅವರು ನಿರ್ದೇಶನ ನೀಡಿದರು.2024-25ನೇ ಸಾಲಿನ ಅನುಷ್ಠಾನಗೊಂಡ ಕಾಮಗಾರಿಗಳಿಗೆ ಸಾಮಾಜಿಕ ಲೆಕ್ಕ ಪರಿಶೋಧನೆ ಕಾರ್ಯವು ಜೂನ್ 02 ರಿಂದ ಪ್ರಾರಂಭವಾಗಿದ್ದು, ಸಾಮಾಜಿಕ ಪರಿಶೋಧನೆ ತಂಡವು ಆ ದಿನವೇ ನರೇಗಾ ಮತ್ತು 15ನೇ ಹಣಕಾಸು ಕಾಮಗಾರಿಗಳ ಕಡತಗಳು ಹಾಗೂ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದು ಸೂಚಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವರಾಜ ಕೆಸರಟ್ಟಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾ.ಉ), ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಎಡಿಪಿಸಿ, ಸಾಮಾಜಿಕ ಪರಿಶೋಧನೆ ಡಿ.ಪಿ.ಎಮ್, ತಾಂತ್ರಿಕ ಸಂಯೋಜಕರು ಹಾಗೂ ಇನ್ನಿತರ ಸಿಬ್ಬಂದಿ ಇದ್ದರು.

# ಕಲ್ಲೂರಿನಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ-2025

ದರಿಂದ ಹೆಚ್ಚಿನ ಇಳುವರಿಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಇಂದು ಬ್ಯಾಟರಿ ಚಾಲಿತ ಕುಡಿ ಚಿವುಟುವ ಯಂತ್ರದ ಬಳಕೆಯನ್ನುಮಾಡಿ ಕುಡಿಯನ್ನು ಚಿವುಟ ಬಹುದು ಎಂದು ತಿಳಿಸಿದರು. ಐ.ಐ.ಹೆಚ್.ಆರ್.ಬೆಂಗಳೂರು ತೋಟಗಾರಿಕೆ ವಿಜ್ಞಾನಿ ಡಾ. ರಘು ಭಾರತೀಯ ತೋಟಗಾರಿಕೆ ಸಂಸ್ಥೆ ಅಭಿವೃದ್ಧಿ ಪಡಿಸಿದ ಅಧಿಕ ಇಳುವರಿ ಕೊಡುವ ತರಕಾರಿ ಮತ್ತು ಹಣ್ಣಿನ ಬೆಳೆಗಳ ಬೀಜದ ಲಭ್ಯತೆ ಮತ್ತು ಸುಧಾರಿತ ಬೇಸಾಯ ಕ್ರಮದ ಬಗ್ಗೆ ಮಾಹಿತಿ ನೀಡಿದರು.

ಭಾರತೀಯ ಪಶು ಚಿಕಿತ್ಸಾ ಸಂಶೋಧನಾ ಸಂಸ್ಥೆ, ಬೆಂಗಳೂರಿನ ಡಾ. ಸುರೇಶ ಜಾನುವಾರುಗಳಿಗೆ ಬಾಧಿಸುವ ಕಾಲುಬಾಯಿ ರೋಗ ಮತ್ತು ಚರ್ಮ ಗಂಟು ರೋಗಗಳ ಲಕ್ಷಣಗಳು, ಲಸಿಕೆಗಳು ಮತ್ತು ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಲ್ಲೂರು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಭೀಮರಾಯ ಮಾತನಾಡಿ ಕೃಷಿ ಇಲಾಖೆಯ ಯೋಜನೆಗಳು ಮತ್ತು ಬೀಜದ ವಿತರಣೆ ಮತ್ತು ಇತ್ತೀಚ್ಚಿಗೆ ಜಾರಿಗೆ ಬಂದ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ, ತುಂತುರು ನೀರಾವರಿ, ತಂತಿಬೇಲಿ ನಿರ್ಮಿಸಲು ಸರಕಾರದಿಂದ ಶೇಕಡ 40 ರಿಂದ 90ರಷ್ಟು ಸಹಾಯಧನ ಲಭ್ಯವಿರುವುದಾಗಿ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಮಹತ್ವದ ಬಗ್ಗೆ ತಿಳಿಸಿ ಅರಣ್ಯ ಇಲಾಖೆಯಿಂದ ಸಸಿಗಳನ್ನು ರೈತರಿಗೆ ವಿತರಿಸಲಾಯಿತು. ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಅಧಿಕಾರಿಗಳನ್ನೊಳಗೊಂಡ ತಂಡದಿಂದ ತಾಲೂಕಿನ ಕಲ್ಲೂರು, ಮಾಚನೂರು, ಒಕ್ರಾಣಿ, ಕಸಬೆ ಕ್ಯಾಂಪ್, ಕಲ್ಮಲಾ ಗ್ರಾಮಗಳ ರೈತರ ಹೊಲಗಳಿಗೆ ಭೇಟಿ ನೀಡಿ ರೈತರೊಂದಿಗೆ ನೇರ ಸಂವಾದ ಮತ್ತು ರೈತ ಘೋಷ್ಠಿಗಳನ್ನು ನಡೆಸಿ ಕೃಷಿಗೆ ಸಂಬಂದಿಸಿದ ಮಾಹಿತಿಯನ್ನು ನೀಡಿದರು. ಡಾ. ಅಫ್ಸನ್‌ಭಾನು ,ಮಾಣಿಕ್, ಶಿವಪ್ಪ, ಸೇರಿದಂತೆ ನೂರಾರು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದರು

# ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ

ಇದರಿಂದಾಗಿ ಸಾಕಷ್ಟು ಅನುಕೂಲವಾಗುತ್ತದೆ. ನಿಷ್ಕಾಳಜಿತನ ತೋರ್ಪಡಿಸಬಾರದು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ರಾಜ್ಯ ಸಮಿತಿ ಸದಸ್ಯ ಶಿವಮೂರ್ತಿ ಹಿರೇಮಠ, ತಾಲೂಕು ಅಧ್ಯಕ್ಷ ಗುರುರಾಜ ಗೌಡೂರು, ಪ್ರಧಾನ ಕಾರ್ಯದರ್ಶಿ ಅಮರಯ್ಯ ಘಂಟಿ, ತಾಲ್ಲೂಕು ಉಪಾಧ್ಯಕ್ಷ ಮಹ್ಮದ್ ಖಾಜಾಹುಸೇನ್, ಜಿಲ್ಲಾ ಸಮಿತಿ ಸದಸ್ಯರಾದ ಶಿವರಾಜ ಕೆಂಭಾವಿ, ಶರಣಯ್ಯ ಒಡೆಯರ್, ಬಲಬೀಮರಾವ ಕುಲಕರ್ಣಿ, ದೇವಣ್ಣ ಕೋಡಿಹಾಳ, ರವಿಕುಮಾರ್ ಕಬ್ಬೆರ್, ಅಮರೇಶ ಕಲ್ಲೂರು, ಅಹ್ಮಜಾದ ಕಂದಗಲ್, ಹಿರಿಯ ಪತ್ರಕರ್ತರಾದ ಘನಮಠದಯ್ಯ ಸ್ವಾಮಿ, ರಾಘವೇಂದ್ರ ಗುಮಾಸ್ತೆ, ಶರಣಪ್ಪ ಆನೆಹೊಸೂರು ಸೇರಿದಂತೆ ತಾಲೂಕಿನ ಎಲ್ಲಾ ಪತ್ರಕರ್ತರು ಇದ್ದರು.

---

## ವೈದ್ಯರ ಪರಿಸರ ಕಾಳಜಿಗೆ ಮೆಚ್ಚುಗೆ

## ಪ್ರತಿ ರೋಗಿಗೂ ಸಸಿ ವಿತರಿಸಿದ ಡಾ. ಅಯ್ಯೂಬ್..!

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.5-** ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದ ಪ್ರತಿ ರೋಗಿಗೂ ಸಸಿಗಳನ್ನು ವಿತರಣೆ ಮಾಡುವ ಮೂಲಕ ಡಾಕ್ಟರ್ ಅಯ್ಯೂಬ್ ಪರಿಸರ ಕಾಳಜಿ ಮೆರೆದರು.

ವಿಶ್ವ ಪರಿಸರ ದಿನಾಚರಣೆ ನಿಮಿತ್ಯ ಪಟ್ಟಣದ ಎಸ್.ಬಿ.ಎಲ್. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳು ಚಿಕಿತ್ಸೆಗೆ ಬಂದ ಎಲ್ಲಾ ರೋಗಿಗಳಿಗೆ ಸಸಿ ವಿತರಿಸಿ, ಪರಿಸರದ ಮಹತ್ವದ ಬಗ್ಗೆ ಅರಿವು ಮೂಡಿಸಿದರು.

ಆಸ್ಪತ್ರೆ ಸಿಬ್ಬಂದಿಗಳಾದ ಸೋಹಿಲ ಅಹ್ಮದ್, ಸಮೀರ್ ಇಬ್ರಾಹಿಂ, ಅಬ್ದುಲ್, ಸೈಯದ್ ಫೆರೋಜ್, ಮಹ್ಮದ್ ರಫಿ ಹಟ್ಟಿ ಸೇರಿ ಇತರರು ಇದ್ದರು.




# ಪರಿಸರ ಸಂರಕ್ಷಣೆಗೆ ಸಂಘ ಸಂಸ್ಥೆಗಳು, ಯುವ ಸಮುದಾಯ ಮುಂದಾಗಲಿ: ಎಚ್.ಶಿವರಾಜ್



ಯುವ ಮಾರ್ಗ ಸುದ್ದಿ

**ದೇವದುರ್ಗ,ಜೂ.5-** ವಿಶ್ವ ಪರಿಸರ ಸಂರಕ್ಷಣೆ ದಿನಾಚರಣೆಯ ಅಂಗವಾಗಿ ದೇವದುರ್ಗ ಪಟ್ಟಣದ ಐತಿಹಾಸಿಕ ಚಂದನಗಿರಿ ಪಟ್ಟಣದ ಆದಿ ಭೈರವ ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಪರಿಸರ ಸಂರಕ್ಷಣಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಆದಿ ಭೈರವ ಲಿಂಗೇಶ್ವರ ದೇವಸ್ಥಾನ ಸಮಿತಿ, ಪೊಲೀಸ್ ಇಲಾಖೆ ದೇವದುರ್ಗ ಮತ್ತು ಕನ್ನಡ ಸಾಹಿತ್ಯ ಪರಿಷತ್ ಸಂಘಟನೆಗಳ ಸಹಯೋಗದಲ್ಲಿ ಸಸಿಗಳನ್ನು ನೆಡುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಪೊಲೀಸ್ ಇಲಾಖೆಯ ಪೊಲೀಸ್ ಪೇದೆಗಳಾದ ಎಲ್.ಎಂ. ವಗ್ಗರ್ ಮತ್ತು ಮರಿಯಪ್ಪ ನಾಯಕ್ ಪೂಜಾರಿ ಕರಿಗುಡ್ಡ ಅವರು ಸಸಿ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಸರಳವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಎಚ್. ಶಿವರಾಜ್, "ಪ್ರಕೃತಿ, ಪರಿಸರ, ಅರಣ್ಯ ಸಂಪತ್ತು ಕಾಪಾಡುವುದು ಮತ್ತು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. 'ಮನೆಗೆ ಒಂದು ಮರ, ಊರಿಗೆ ಒಂದು ವನ', 'ಹಸಿರೇ ಉಸಿರು, ಉಸಿರೇ ಹಸಿರು' ಎಂಬ ತತ್ವಗಳ ಅಡಿಯಲ್ಲಿ ಅರಣ್ಯ ಸಂಪತ್ತಿನ ವಿನಾಶವನ್ನು ತಡೆಗಟ್ಟಬೇಕು" ಎಂದರು.ಅರಣ್ಯ ನಾಶದಿಂದ ಪ್ರಕೃತಿ ಮತ್ತು ಹವಾಮಾನದಲ್ಲಿ ಏರುಪೇರಾಗಿದ್ದು, ಸಕಾಲಕ್ಕೆ ಮಳೆಯಾಗದೆ ಉಷ್ಣತೆ ಹೆಚ್ಚುತ್ತಿದೆ. ಮಾನವನು ಪರಿಸರ ಸಂರಕ್ಷಣೆ ಮಾಡಿದರೆ ಅವನ ಬದುಕು ಹಸಿರಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ, ಅರಣ್ಯ ಇಲಾಖೆ, ಸಾಮಾಜಿಕ ಮತ್ತು ಪ್ರಾದೇಶಿಕ ಅಧಿಕಾರಿಗಳು ಪರಿಸರದ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಬೇಕು. ಶಾಲಾ-ಕಾಲೇಜುಗಳು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಪಠ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಯ ವಿಷಯಗಳನ್ನು ಅಳವಡಿಸಬೇಕು ಎಂದು ಅವರು ಸಲಹೆ ನೀಡಿದರು.ಈ ಸಂದರ್ಭದಲ್ಲಿ ಆದಿ ಭೈರವಲಿಂಗೇಶ್ವರ ದೇವಸ್ಥಾನದ ಮುಖ್ಯಸ್ಥರಾದ ಶಿವರಾಜ್, ಚನ್ನಬಸವ, ಸಂತೋಷ್, ನಿಂಗಪ್ಪ ಪೂಜಾರಿಗಳು, ಸಾಬಣ್ಣ ಗಾಲಿ, ಹನುಮಂತ್ ರಾಯ ನಾಯಕ್, ರಂಗಯ್ಯ ಕಲೇರ, ನಾಗರಾಜ್ ಪೂಜಾರಿ, ರಂಗಣ್ಣ ಇರಾಬ, ಗೇರ ಅಲಿ ಕರಿಗುಡ್ಡ, ಸಿದ್ದಪ್ಪ, ಚಂದ್ರನಗಿರಿ ಪಟ್ಟಣದ ನಾಗರಿಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದು, ಸಸ್ಯ ನೆಡುವ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಬದುಕಿ ಬಾಳಬೇಕಾದ ಕಾಲದಲ್ಲಿ ಜೀವ ಕಳೆದುಕೊಂಡ ದುರ್ದೈವಿಗಳು



**ಬೆಂಗಳೂರು, ಜೂ.5-**ಭವಿಷ್ಯದಲ್ಲಿ ತಮ್ಮ ಕುಟುಂಬಗಳಿಗೆ ಆಧಾರ ಸ್ಥಂಭವಾಗಬೇಕಿದ್ದ ಹಾಗೂ ಚೆನ್ನಾಗಿ ಬದುಕಿ ಬಾಳಬೇಕಾದವರೇ ನಿನ್ನೆಯ ದುರಂತದಲ್ಲಿ ಸಾವನ್ನಪ್ಪಿರುವುದು ಘೋರ ಅಧ್ಯಾಯವಾಗಿದೆ. ಕಾಲ್ತುಳಿತದಲ್ಲಿ ಬಲಿಯಾದವರ ವಯಸ್ಸು 14, 17, 19, 19, 20, 20, 20, 23, 26 ಮತ್ತು 29 ವರ್ಷದೊಳಗಿನವರಾಗಿರುವುದನ್ನು ನೋಡಿದರೆ ವಿಧಿಯ ವಿಪರ್ಯಾಸಕ್ಕೆ ಬಲಿಯಾದವರು ಬದುಕಿ ಬಾಳಬೇಕಿರುವವರೇ ಎನ್ನುವುದು ವಿಷಾದಕರ ವಿಷಯವಾಗಿದೆ.

ನಿನ್ನೆಯ ಕಾಲ್ತುಳಿತದಲ್ಲಿ ಬಲಿಯಾದವರು 14 ವರ್ಷದಿಂದ 29 ವರ್ಷದೊಳಗಿನವರು ಎಂದು ಗುರುತಿಸಲಾಗಿದೆ. ಒಂಬತ್ತನೆ ತರಗತಿ ವಿದ್ಯಾರ್ಥಿನಿ 14 ವರ್ಷದ ದಿವ್ಯಾಂತಿ ಸೇರಿದಂತೆ 29 ವರ್ಷದ ಕಾಮಾಕ್ಷಿದೇವಿ ಮೃತರಪಟ್ಟಿಯಲ್ಲಿ ಸೇರಿದ್ದಾರೆ. ಅದರಲ್ಲೂ ಮೃತಪಟ್ಟವರಲ್ಲಿ ವಿದ್ಯಾರ್ಥಿಗಳು, ಡಾಕ್ಟರ್, ಸಿಎ, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಎನ್ನುವುದು ತೀವ್ರ ನೋವಿನ ಸಂಗತಿಯಾಗಿದೆ.ತಮ್ಮ ನೆಚ್ಚಿನ ಆಟಗಾರರನ್ನು ಕಣ್ಣುಂಬಿಕೊಳ್ಳಲು ಬಂದಿದ್ದ ಕನಕಶ್ರೀ ಬಡಾವಣೆಯ 9ನೇ ತರಗತಿ ವಿದ್ಯಾರ್ಥಿ 14 ವರ್ಷದ ದಿವ್ಯಾಂಶಿ ತಮ್ಮ ತಾಯಿಯ ಕಣ್ಣೆದುರೆ ಪ್ರಾಣ ಕಳೆದುಕೊಂಡಿರುವುದು ನೋಡಿದರೆ ಎದೆ ಝುಲ್ ಎನ್ನುತ್ತದೆ.

ಶಿವಕುಮಾರ್ ಮತ್ತು ಅಶ್ವಿನಿ ಎಂಬುವವರ ಪುತ್ರಿ ದಿವ್ಯಾಂಶಿ ನಿನ್ನೆ ಮಧ್ಯಾಹ್ನ ತಾಯಿ ಮತ್ತು ಚಿಕ್ಕಮ್ಮ ರಚನಾ ಅವರೊಂದಿಗೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಬಂದಿದ್ದಾಗ ಸಂಭವಿಸಿದ ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಅದೇ ರೀತಿ 19 ವರ್ಷದ ಚಿನ್ಮಯಿ ಶೆಟ್ಟಿ ಕೂಡ ಅನಾಹುತದಲ್ಲಿ ಜೀವ ಕಳೆದು ಕೊಂಡಿದ್ದು ಶೋಕ ಸಾಗರದ ನಡುವೆ ಬನಶಂಕರಿಯ ಶವಾಗಾ ರದಲ್ಲಿ ಆಕೆಯ ಅಂತ್ಯ ಸಂಸ್ಕಾರ ನೆರವೇರಿಸಲಾಗಿದೆ.ಇನ್ನು ವಿರಾಟ್ ಕೊಹ್ಲಿ ಅವರ ಕಟ್ಟಾ ಅಭಿಮಾನಿಯಾಗಿದ್ದ ಮೂಲತಃ ಯಾದಗಿರಿ ಜಿಲ್ಲೆಯವರಾಗಿದ್ದು, ಯಲಹಂಕ ಸರ್ಕಾರಿ ಶಾಲೆಯಲ್ಲಿ ಎಸ್‌ಎಸ್‌ಎಸ್‌ಸಿ ವ್ಯಾಸಂಗ ಮಾಡುತ್ತಿದ್ದ ಶಿವು (17) ಕೂಡ ಕಾಲನ ಸೆಳೆತಕ್ಕೆ ಸಿಲುಕಿ ಜೀವ ತೆತ್ತಿದ್ದಾರೆ. ಶಿವು ತಂದೆ, ತಾಯಿ ಗಾರೆ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದು, ಇದೀಗ ಭವಿಷ್ಯಕ್ಕೆ ಆಧಾರವಾಗಿದ್ದ ಮಗನನ್ನು ಕಳೆದುಕೊಂಡು ಕಣ್ಣೀರಧಾರೆ ಹರಿಸುತ್ತಿದ್ದಾರೆ.

ಇನ್ನು ಕೋಲಾರದ ಕೆಜಿಎಫ್ ತಾಲ್ಲೂಕಿನ ಬುಡಮಾಕನಹಳ್ಳಿ ಶಿಕ್ಷಕ ಸುರೇಶ್ ಬಾಬು ಮತ್ತು ಮಂಜುಳಾ ದಂಪತಿ ಪುತ್ರಿ ಸಹನಾ (23) ಇಂಜಿನಿಯರಿಂಗ್ ಪದವಿ ಪೂರೈಸಿ ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಆಕೆಗೆ ಮದುವೆ ಮಾಡಲು ಪೋಷಕರು ವರನ ಹುಡುಕಾಟ ನಡೆಸುತ್ತಿದ್ದ ಸಂದರ್ಭದಲ್ಲೇ ಕಾಲ್ತುಳಿತಕ್ಕೆ ಬಲಿಯಾಗಿದ್ದಾರೆ.ಮಂಡ್ಯ ಜಿಲ್ಲೆಯ ಕೆ.ಆರ್ ಪೇಟೆ ತಾಲ್ಲೂಕಿನ ರಾಯಸಮುದ್ರದ ಸಿವಿಲ್ ಎಂಜಿನಿಯರ್ ಪೂರ್ಣಚಂದ್ರ (20) ಹಾಗೂ ಹಾಸನ ಜಿಲ್ಲೆಯ ಬೇಳೂರಿನ ಭೂಮಿಕ್ ದಾಸರಹಳ್ಳಿಯ ಸೌಂದರ್ಯ ಕಾಲೇಜಿನಲ್ಲಿ ಓದುತ್ತಿದ್ದು, ಸ್ನೇಹಿತರೊಂದಿಗೆ ಆರ್‌ಸಿಬಿ ವಿಜಯೋತ್ಸವದಲ್ಲಿ ಭಾಗಿಯಾಗಲು ಹೋಗಿ ಜೀವ ಕಳೆದುಕೊಂಡಿದ್ದಾರೆ.ಮ ಅನಾಹುತದಲ್ಲಿ ಮೃತಪಟ್ಟಿರುವ ಎಲ್ಲರ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬ ಸದಸ್ಯರಿಗೆ ಶವಗಳನ್ನು ಹಸ್ತಾಂತರಿಸಲಾಗಿದ್ದು, ಬಹುತೇಕ ಎಲ್ಲರೂ ಉಸಿರುಗಟ್ಟಿ ಮೃತಪಟ್ಟಿರುವುದಾಗಿ ವೈದ್ಯರ ವರದಿಯಲ್ಲಿ ತಿಳಿದುಬಂದಿದೆ. ಅನಾಹುತದ'ಲ್ಲಿ 40ಕ್ಕೂ ಹೆಚ್ಚು ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಕೆಲವರು ಇಂದು ಡಿಸ್ಚಾರ್ಜ್ ಆಗಿದ್ದು, ಇನ್ನು ಕೆಲವರು ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿದುಬಂದಿದೆ.

## ಶಂಕಲಿಂಗನಗುಡಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

**ಶಹಾಬಾದ,ಜೂ.5:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ಹಳೇ ಶಹಾಬಾದಿನ ಶಂಕರಲಿಂಗನಗುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಅರಣ್ಯಾಧಿಕಾರಿ ಖಾಲೀದ್ ಪಟೇಲ ಅವರು, ಮಕ್ಕಳ ರೀತಿಯಲ್ಲಿ ನೆಟ್ಟ ಸಸಿಗಳನ್ನು ಪೋಷಿಸಬೇಕಿದೆ. ಪ್ರತಿ ಮಗು ಗಿಡ ಹಚ್ಚಬೇಕು. ಹಸಿರಿದ್ದರೆ ಉಸಿರು ಎಂಬುದನ್ನು ಯಾರು ಮರೆಯಬಾರದು ಎಂದು ಪರಿಸರ ಸಂರಕ್ಷಣೆ ಕುರಿತು ಮಕ್ಕಳಿಗೆ ತಿಳಿಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯ ವಾಜೀದ ಖಾನ್ ಜಮಾದಾರ, ಮುಖಂಡ ಸನ್ನಾವುಲಾ ಸಾಹೇಬ್, ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಶರಣಗೌಡ ಪಾಟೀಲ, ಮುಖ್ಯ ಗುರುಗಳಾದ ಅಂಜನಾ ದೇವಿ, ಶಿಕ್ಷಕಿಯರಾದ ಶಿವಲೀಲಾ, ರತ್ನಾ ಪಾಟೀಲ, ಷಣ್ಮುಖಪ್ಪ, ಅರಣ್ಯ ಇಲಾಖೆ ಸಿಬ್ಬಂದಿಗಳಾದ ರಮೇಶ್ ಹಾದಿಮನಿ, ವೆಂಕಟೇಶ್ ಮಾರುತಿ ಹಾಗೂ ಸ್ಥಳೀಯ ನಿವಾಸಿಗಳಾದ ಶಾಂತಪ್ಪ ಹಡಪದ, ರಾಯಣ್ಣ, ಭರತ ಪೊತನಕರ್ ಸೇರಿದಂತೆ ಮುಂತಾದವರು ಹಾಜರಿದ್ದರು.



ಯುವ ಮಾರ್ಗ

ಶುಕ್ರವಾರ : 06-06-2025

# ಮೃತಪಟ್ಟವರ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರ ಘೋಷಿಸಿದ ಆರ್‌ಸಿಬಿ

**ಬೆಂಗಳೂರು,ಝೂ.5–**ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನೆನ್ನೆ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಮೃತಪಟ್ಟವರಕು ಟುಂಬಗಳಿಗೆ ತಲಾ ಹತ್ತು ಲಕ್ಷ ರೂಪಾ ಯಿ ಪರಿಹಾರ ನೀಡುವುದಾಗಿ ಆರ್‌ಸಿಬಿ ಆಡಳಿತ ಮಂಡಳಿ ತಿಳಿಸಿದೆ.

ದೇಶಾದ್ಯಂತ ಭಾರಿ ಟೀಕೆಗೆ ಒಳಗಾದ ಈ ಪ್ರಕರಣದಲ್ಲಿ ಆರ್‌ಸಿಬಿ ತನ್ನ ಅಬಿಮಾನಿಗಳಿಗಾಗಿ ಸಂತಾಪ ಸೂಚಿಸಿ ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂಪಾಯಿಯನ್ನು ಘೋಷಣೆ ಮಾಡಿದೆ.

ಇನ್ನು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರಿಗಾಗಿ ಕೂಡ ನೆರವನ್ನು ನೀಡಲಿದ್ದು ಇದಕ್ಕಾಗಿ ವಿಶೇಷ ನಿಧಿಯನ್ನು ಕೂಡ ರಚಿಸಲಾಗುವುದು ಎಂದು ಆರ್‌ಸಿಬಿ ಮ್ಯಾನೇಜ್ಮೆಂಟ್ ಪ್ರಕಟಣೆ ತಿಳಿಸಿದೆ.

ಈಗಾಗಲೇ ಆರ್‌ಸಿಬಿ ತಂಡದ ನಾಯಕ ರಜತ್, ವಿರಾಟ್ ಕೊಹ್ಲಿ ಸೇರಿದಂತೆ ಹಲವು ಆಟಗಾರರು ಕೂಡ ನೆರವು ನೀಡಲು ಮುಂದಾಗುತ್ತಿದ್ದಾರೆ ಎಂಬ ಮೂಲಗಳು ತಿಳಿಸಿವೆ.

ದೇಶದ ಶ್ರೀಮಂತ ಕ್ರೀಡಾ ಸಂಸ್ಥೆಯಾದ ಬಿಸಿಸಿಐ ಕೂಡ ಇದಕ್ಕೆ ಸ್ಪಂದಿಸಬೇಕು ಮತ್ತು ಐಪಿಎಲ್ ಕೋಶವು ಕೂಡ ಇದರ ಬಗ್ಗೆ ಗಂಭೀರ ಚಿಂತನೆ ಮಾಡಿ ಪರಿಹಾರ ಮೊತ್ತವನ್ನು ನೀಡಬೇಕು ಎಂಬ ಒತ್ತಡ ಅಭಿಮಾನಿ ವೃದ್ಧ ದಿಂದ ಕೇಳಿ ಬಂದಿದೆ.ಇದೆ ವೇಳೆ ರಾಜ್ಯ ಸರ್ಕಾರ ಕೂಡ ಮೃತಪ ಟ್ಟವರ ಕುಟುಂಬಕ್ಕೆ ತಲಾ 10 ಲಕ್ಷ ರೂ. ಪರಿಹಾರ ಘೋಷಿಸಿದೆ. ಕೆಸಿಎಸ್‌ಎ ಕೂಡ ತಲಾ 5 ಲಕ್ಷ ರೂ ಪರಿಹಾರ ಘೋಷಣೆ ಮಾಡಿದ್ದು ಮೃತಪಟ್ಟವರ ಕುಟುಂಬಗಳಿಗೆ 25 ಲಕ್ಷ ಪರಿಹಾರ ಘೋಷಣೆ ಮಾಡಿದ ಂತಾಗಿದೆ.

# ಹೊಂದಾಣಿಕೆ ಕೊರತೆ, ಸ್ವಪ್ರತಿಷ್ಠೆ ಪೈಪೋಟಿಗೆ ಅಮಾಯಕ ಜೀವಗಳು ಬಲಿ



**ಬೆಂಗಳೂರು,ಜೂ.5–** ಸರ್ಕಾರದ ಪ್ರಮುಖ ಹುದ್ದೆಯಲ್ಲಿರುವವರ ನಡುವೆ ಹೊಂದಾಣಿಕೆಯ ಕೊರತೆ, ಪ್ರಚಾರದ ತುಡಿತ ಹಾಗೂ ಅಸೀಮ ನಿರ್ಲಕ್ಷ್ಯ ನಿನ್ನೆ ಚಿನ್ನಸ್ವಾಮಿ ಕ್ರಿ?ಡಾಂಗಣದ ಬಳಿ ಕಾಲ್ತುಳಿತಕ್ಕೆ ಕಾರಣವಾಗಿರುವ ಅಂಶಗಳಲ್ಲಿ ಪ್ರಮುಖವಾಗಿವೆ. ಆರ್‌ಸಿಬಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ಪಂದ್ಯಾವಳಿ ಗೆಲ್ಲುತ್ತಿದ್ದಂತೆ ರಾಯಲ್ ಚಾಲೆಂಜರ್‌ಸ ಸಂಭ್ರಮದ ವಿಜಯ ಯಾತ್ರೆ ಯನ್ನು ಘೋಷಿಸಿತು. ಮಧ್ಯರಾತ್ರಿ ರಾಯಲ್ ಚಾಲೆಂಜರ್‌ಸ ಪ್ರಕಟಣೆ ಸರ್ಕಾರಕ್ಕೆ ಪೀಕಲಾಟ ತಂದಿತ್ತು.

ಐಪಿಎಲ್ ಪಂದ್ಯಾವಳಿ ಅದರಲ್ಲೂ ಕಪ್ ನಮ್ದೆ ಎಂಬ ಘೋಷಣೆ ಜನರಲ್ಲಿ ಸಾಮೂಹಿಕ ಸನ್ನಿಯಾಗಿದ್ದವು. ಸರ್ಕಾರ ಆರ್‌ಸಿಬಿ ಘೋಷಿಸಿದ ವಿಜಯಯಾತ್ರೆಯನ್ನು ನಿರಾಕರಿಸಲೂ ಆಗದೇ, ಬೆಂಬಲಿಸಲೂ ಆಗದೇ ಮಧ್ಯಾಹ್ನದವರೆಗೂ ಪೀಕಲಾಟಕ್ಕೆ ಸಿಲುಕಿತ್ತು. ನಿನ್ನೆ ಬೆಂಗಳೂರಿನಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್,ಈ ವಿಜಯೋತ್ಸವ ಹಾಗೂ ಸಂಭ್ರಮಾಚರಣೆಯನ್ನು ಎಲ್ಲಿ,ಹೇಗೆ ಮಾಡಬೇಕೆಂದು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ಆರ್‌ಸಿಬಿಯವರೇನೋ ಘೋಷಣೆ ಮಾಡಿದ್ದಾರೆ. ಆದರೆ ಭದ್ರತೆ ವ್ಯವಸ್ಥೆ ಮಾಡಬೇಕಿರುವುದು ನಮ ಪೊಲೀಸರೇ ಎಂದು ಹೇಳಿದ್ದರು.

ಗೃಹಸಚಿವ ಪರಮೇಶ್ವರ್ ಕೂಡ ಕಾರ್ಯಕ್ರಮ ಎಲ್ಲಿ, ಏನು, ಸ್ವರೂಪಗಳ ಬಗ್ಗೆ ಇನ್ನೂ ನಿರ್ಧಾರವಾಗಬೇಕು. ಕರ್ನಾಟಕ ಕ್ರಿಕೆಟ್ ಮಂಡಳಿಯ ಕಾರ್ಯದರ್ಶಿಯವರು ತಮ ಜೊತೆ ಚರ್ಚೆ ಮಾಡಿ ಕೆಲ ಸಲಹೆ ನೀಡಿದ್ದರು. ಆದರೆ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದಿದ್ದರು. ಇದಾದ ಸ್ವಲ್ಪ ಹೊತ್ತಿನಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಟಗಾರರನ್ನು ಅಭಿನಂದಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಟಿಸಿದರು.

ಗೃಹಸಚಿವರು ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಜೊತೆ ಚರ್ಚೆಯನ್ನು ನಡೆಸಿದ್ದರು. ಆ ನಂತರ ವಿಧಾನಸೌಧದ ಮೆಟ್ಟಿಲುಗಳ ಮೇಲೆ ವೇದಿಕೆ ನಿರ್ಮಾಣ ಹಾಗೂ ಇತರ ಸಿದ್ಧತೆಗಳು ಚಾಲುಗೊಂಡವು. ಅಭಿಮಾನಿಗಳಿಗೆ ಕಾರ್ಯಕ್ರಮ ಎಲ್ಲಿ ಎಂಬ ವಿಚಾರಗಳಲ್ಲಿ ಸಾಕಷ್ಟು ಗೊಂದಲಗಳಿದ್ದವು. ಅದಕ್ಕೆ ಯಾರಿಂದಲೂ ಸ್ಪಷ್ಟವಾದ ಸ್ಪಷ್ಟನೆ ಸಿಗಲಿಲ್ಲ. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ನಡೆಯಲಿದೆ.

ವಿಜಯ ಯಾತ್ರೆಯನ್ನು ರದ್ದುಗೊಳಿಸಲಾಗಿದೆ ಎಂದು ಪದೇಪದೇ ಪ್ರಕಟಿಸಲಾಗುತ್ತಿತ್ತು. ಐಪಿಎಲ್ ಕ್ರಿಕೆಟ್ ಎಂಬುದು ಸಂಪೂರ್ಣ ಖಾಸಗಿ ಕಾರ್ಯಕ್ರಮವಾಗಿತ್ತು. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಟಗಾರರನ್ನು ಕರೆಸಿ ಅಭಿನಂದಿಸುವ ಜರೂರತ್ ಏನಿತ್ತು ಎಂಬುದು ಹಲವರ ಪ್ರಶ್ನೆಗಳಾಗಿದ್ದವು. ಸಂಭ್ರಮದ ಸಮೂಹ ಸನ್ನಿಯಲ್ಲಿ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿದ್ದವು.

ಸರ್ಕಾರದವರು ಇದೊಂದು ಸರ್ಕಾರಿ ಕಾರ್ಯಕ್ರಮ ಎಂಬಂತೆ ಸಂಭ್ರಮಿಸಿ ತಾವೇ ಮುಂದೆ ನಿಂತು ಕಾರ್ಯಕ್ರಮ ಆಯೋಜನೆ ಮಾಡಿದ್ದು ಅನಗತ್ಯ ಎನ್ನಿಸಿತ್ತು. ಕರ್ನಾಟಕ ಕ್ರಿಕೆಟ್ ಮಂಡಳಿ ಹಾಗೂ ಆರ್‌ಸಿಬಿಯ ಉತ್ಸಾಹಕ್ಕೆ ತಿಳಿಹೇಳುವ ವ್ಯವಧಾನ ಸರ್ಕಾರಕ್ಕೂ ಇರಲಿಲ್ಲ. ಎಲ್ಲದಕ್ಕೂ ತಾವೇ ಮುಂದಾಗಿ ಕ್ರಿಕೆಟ್ ವಿಜಯವವನ್ನು ಸಂಭ್ರಮಿಸಲು ಟೊಂಕ ಕಟ್ಟಿ ನಿಂತಿದ್ದರು.

ಬೆಳಿಗ್ಗೆ 11 ಗಂಟೆಯಿಂದಲೇ ವಿಧಾನಸೌಧದ ಮುಂಭಾಗ ಜನ ಜಮಾವಣೆಗೊಳ್ಳಲಾರಂಭಿಸಿದ್ದು ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮಧ್ಯಾಹ್ನ 12 ಗಂಟೆಯೊಳಗೆ ವಿಧಾನಸೌಧದ ಮುಂಭಾಗದ ರಸ್ತೆಯಲ್ಲೆ ದ್ವಿಚಕ್ರ ವಾಹನಗಳ ಅನಧಿಕೃತ ಪಾರ್ಕಿಂಗ್ ಆರಂಭವಾಯಿತು. ಜನರನ್ನು ಆರಂಭದಲ್ಲೆ? ನಿಯಂತ್ರಿಸಿ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನಗಳು ನಡೆಯಲೇ ಇಲ್ಲ. ಸಮೂಹ ಸಂಹಿತೆ ಮಾಧ್ಯಮಗಳ ಪ್ರಚಾರವೂ ಮತ್ತಷ್ಟು ಇಂಬು ನೀಡಿತ್ತು. ಜನರ ಸಂಭ್ರಮಕ್ಕೆ ಅಡ್ಡಿಪಡಿಸಿದರೆ ನಿಷ್ಠುರವಾಗಬೇಕಾಗಬಹುದು ಎಂಬ ಗೊಂದಲದಲ್ಲೆ ಸರ್ಕಾರ ಪರಿಸ್ಥಿತಿ ಹೋದಂತೆಲ್ಲಾ ಕೈಬಿಟ್ಟು ಮೂಕಪ್ರೇಕ್ಷಕನಂತೆ ವರ್ತಿಸಿತ್ತು.

ವಿಧಾನಸೌಧದ ಮುಂದೆಯೂ ಸರಿಯಾದ ಬಂದೋಬಸ್ತ್ ಆಯೋಜಿಸದೆ ಸಮರ್ಪಕ ಪೊಲೀಸ್ ಸಿಬ್ಬಂದಿಯನ್ನೂ ನಿಯೋಜಿಸದೇ ಆರಂಭದಿಂದಲೂ ಎಡವಲಾರಂಭಿಸಿತು.

ಪರಿಸ್ಥಿತಿಯನ್ನು ಸುಧಾರಿಸುವ ಬದಲಾಗಿ ಸಿಕ್ಕಸಿಕ್ಕಲೆಲ್ಲಾ ಮಾತನಾಡುತ್ತಾ ಪ್ರಚಾರ ಪಡೆಯುವ ಉಮೇದಿನಲ್ಲಿ ಪೈಪೋಟಿ ನಡೆಸಿದರೇ ಹೊರತು ಯಾರೂ ವಾಸ್ತವ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನ ಮಾಡಲಿಲ್ಲ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕ್ರಿಕೆಟ್ ಆಟಗಾರರನ್ನು ಸನಾನಿಸಿ ಚಿನ್ನಸ್ವಾಮಿ ಕ್ರೀಡಾಂಗಣದತ್ತ ಆಟಗಾರರು ತೆರಳುವ ವೇಳೆಯಲ್ಲೆ ತಳ್ಳಾಟ, ನೂಕಾಟಗಳಾಗಿ ಕೆಲವರ ಪರಿಸ್ಥಿತಿ ಗಂಭೀರವಾಗಿತ್ತು ಎಂದು ಹೇಳಲಾಗಿದೆ.ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಲೂ ಲಕ್ಷಾಂತರ ಸಂಖ್ಯೆಯಲ್ಲಿ ಜನ ಜಮಾವಣೆಗೊಂಡಿದ್ದಾಗಲೂ ಎಚ್ಚೆತ್ತುಕೊಂಡು ಕಾರ್ಯಕ್ರಮ ರದ್ದುಪಡಿಸುವ ಅಥವಾ ಅಭಿಮಾನಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಜವಾಬ್ದಾರಿಯನ್ನು ಯಾರೂ ಪ್ರದರ್ಶಿಸಲಿಲ್ಲ.

ಪೊಲೀಸರು ಆಡಳಿತ ವ್ಯವಸ್ಥೆಯ ವೈಫಲ್ಯದ ನಡುವೆಯೂ ಅತ್ಯಂತ ಸಂಯಮದಿಂದ ವರ್ತಿಸಿದರು. ಅಭಿಮಾನಿಗಳ ಮೇಲೆ ಎಲ್ಲಿಯಾದರೂ ಲಾಠಿ ಬೀಸಿದ್ದರೆ ಮತ್ತಷ್ಟು ದುರಂತಗಳು ನಡೆದುಹೋಗುತ್ತಿದ್ದವು. ಜನ ದುಗುಡಕ್ಕೆ ಒಳಗಾಗಿ ಕಾಲ್ತುಳಿತದ ಪ್ರಕರಣಗಳು ಹೆಚ್ಚಾಗಬಹುದಿತ್ತು. ಇದಕ್ಕೆ ಅವಕಾಶ ನೀಡದಂತೆ ಪೊಲೀಸರು ಜವಾಬ್ದಾರಿಯಿಂದ ನಿರ್ವಹಿಸಿದರು. ಆದರೆ ಕ್ರಿಕೆಟ್ ಅನ್ನು ಆಟದ ಬದಲಾಗಿ ಲಾಭದ ದೃಷ್ಟಿಯಿಂದ ನೋಡುವ ಖಾಸಗಿ ಸಂಸ್ಥೆಗಳು ಸರ್ಕಾರದ ಪ್ರಚಾರದ ಇಡೀ ವ್ಯವಸ್ಥೆಯನ್ನು ಹದಗೆಡಿಸಿತ್ತು.

# ಆರ್‌ಸಿಬಿ ವಿಜಯೋತ್ಸವ ದುರಂತ : ಘಟನಾ ಸ್ಥಳ ಪರಿಶೀಲಿಸಿದ ಗೃಹ ಸಚಿವ

**ಬೆಂಗಳೂರು,ಜೂ.5–** ಗೃಹಸಚಿವ ಡಾ.ಜಿ. ಪರಮೇಶ್ವರ್ ಕಾಲ್ತುಳಿತ ಸಂಭವಿಸಿದ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪ್ರತಿಯೊಂದು ಗೇಟ್‌ಗಳನ್ನು ಖುದ್ದು ಪರಿಶೀಲನೆ ನಡೆಸಿದರು. ಕ್ರೀಡಾಂಗಣದ ಗೇಟ್‌ಗಳ ಮುಂದೆ ಕಾಲ್ತುಳಿತವಾದಾಗ ಆತಂಕಗೊಳಗಾದ ಜನ ಬಿಟ್ಟು ಹೋದ ಚಪ್ಪಲಿಗಳ ರಾಶಿ ಕಂಡು ಸಚಿವರು ಆಶ್ಚರ್ಯಚಕಿತರಾದರು. ಅಭಿಮಾನಿಗಳಿಂದ ಹಾನಿಗೊಳಗಾದ ಗೇಟ್ ಅನ್ನು ಖುದ್ದು ಅಲುಗಾಡಿಸಿ ಪರಿಶೀಲಿಸಿದರು.

ಸ್ಥಳೀಯ ಪೊಲೀಸ್ ಇನ್ಸ್‌ಪೆಕ್ಟರ್ ಜೊತೆ ಸಮಾಲೋಚನೆ ನಡೆಸಿ ಮಾಹಿತಿ ಕಲೆ ಹಾಕಿದರು. ಪ್ರತಿಯೊಂದು ಗೇಟ್‌ಗೂ ಪೊಲೀಸ್ ಆಯುಕ್ತ ಬಿ.ದಯಾನಂದ ಅವರ ಜೊತೆ ಭೇಟಿ ನೀಡಿದ ಗೃಹಸಚಿವರು, ಎಲ್ಲೆಲ್ಲಿ, ಯಾವ ರೀತಿಯ ಘಟನೆಗಳಾದವು, ಉಚಿತ ಟಿಕೆಟ್ ಘೋಷಣೆ ಮಾಡಿದ ಸಮಯ ಏನು, ಅಲ್ಲಿಂದ ದುರಂತ ನಡೆದ ಗೇಟ್‌ಗೆ ಇರುವ ಅಂತರವೆಷ್ಟು ಎಂಬೆಲ್ಲಾ ಮಾಹಿತಿಗಳನ್ನು ಪರಿಶೀಲಿಸಿದರು.



ಗೇಟ್‌ಗಳ ಬಳಿ ಕಾವಲಿಗೆ ನಿಂತಿದ್ದ ಅಧಿಕಾರಿಗಳ್ಯಾರು?, ಯಾವ ರೀತಿ ದುರಂತ ಸಂಭವಿಸಿತು ಎಂಬ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.ಎತ್ತರದ ಗೇಟ್‌ಗಳನ್ನು ಜನ ಹತ್ತಿ ಬಂದಿದ್ದಾರೂ ಹೇಗೆ?, ಆ ವೇಳೆ ಪೊಲೀಸರು ಸ್ಥಳದಲ್ಲಿರಲಿಲ್ಲವೇ? ಎಂಬ ಪ್ರಶ್ನೆಗಳನ್ನು ಗೃಹಸಚಿವರು ಕೇಳಿದ್ದಾರೆ.

ಕ್ರೀಡಾಂಗಣದ ಒಳಗೂ ಭೇಟಿ ನೀಡಿ ಆಸನದ ವ್ಯವಸ್ಥೆಗಳು, ಜನಸಂಖ್ಯೆ ಎಷ್ಟಿತ್ತು ಎಂಬೆಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದಾರೆ.ಸ್ಥಳ ಪರಿಶೀಲನೆ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲೆ ಕರ್ನಾಟಕ ಕ್ರಿಕೆಟ್ ಮಂಡಳಿ ಹಾಗೂ ರಾಯಲ್ ಚಾಲೆಂಜರ್ಸ್ ತಂಡದ ಪ್ರಾಂಚಸಿಯ ಮುಖ್ಯಸ್ಥರ ಜೊತೆ ಚರ್ಚೆ ನಡೆಸಿ ವಿವರಣೆ ಪಡೆದುಕೊಂಡಿದ್ದಾರೆ.ನಿನ್ನೆ ಕ್ರೀಡಾಂಗಣದಲ್ಲಿ ಸಂಭ್ರಮಾಚರಣೆ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು. ಗೃಹಸಚಿವರು ಮತ್ತು ಮುಖ್ಯಮಂತ್ರಿ ಕಾರ್ಯಕ್ರಮದಿಂದ ದೂರ ಇದ್ದರು.

# ಗೃಹಮಂತ್ರಿಗಳ ಬದಲಾವಣೆಗೆ ದೇವಿಂದ್ರ ದೇಸಾಯಿ ಕಲ್ಲೂರ ಆಗ್ರಹ

**ಕಲಬುರಗಿ,ಜೂ.5–** ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ದಿನದಿಂದ ದಿನಕ್ಕೆ ಹದಗೆಟ್ಟು ಹೋಗುತ್ತಿದೆ. ಆದರೆ ಸರ್ಕಾರ ಯಾವುದೇ ಕಟ್ಟು ನಿಟ್ಟಿನ ಕ್ರಮಕ್ಕೆ ಮುಂದಾಗದೇ ಇರುವುದು ಖಂಡನಿಯ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಘಟನೆಯಲ್ಲಿ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಜನರ ರಕ್ಷಣೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು ನೈತಿಕ ಹೊಣೆ ಹೊತ್ತು, ಗೃಹಮಂತ್ರಿ ಡಾ. ಜಿ. ಪರಮೇಶ್ವರ ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿಯ ಓಬಿಸಿ ಮೋರ್ಚಾ ನಗರಾಧ್ಯಕ್ಷ ದೇವಿಂದ್ರ ದೇಸಾಯಿ ಕಲ್ಲೂರ ಅವರು ಒತ್ತಾಯಿಸಿದ್ದಾರೆ.

ಆರ್‌ಸಿಬಿ ಐಪಿಲ್ ಕಪ್ ಗೆದ್ದ ತಕ್ಷಣ ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಎಲ್ಲೆಡೆ ಸಂಭ್ರಮಾಚರಣೆ ಮಾಡಲಾಯಿತು. ಇದು ಕನ್ನಡಿಗರಲ್ಲಿ ಆರ್‌ಸಿಬಿ ತಂಡಕ್ಕೆ ಇರುವ ಅಭಿಮಾನವನ್ನು ಕಾಣಿತು. ಚಿನ್ನಸ್ವಾಮಿ ಕ್ರೀಡಾಂಗಣದ ದುರ್ಘಟನೆ

ತಡೆಯಲು ಪೊಲೀಸರು ಚಿಂತನೆ ,ಮುಂದಾಲೋಚನೆ ಮಾಡಬೇಕಾಗಿತ್ತು. ಅಭಿಮಾನಿಗಳ ಹರ್ಷ ಕಂಡರೆ ಯಾವ ಹಂತಕ್ಕೆ ಪರಿಸ್ಥಿತಿಯನ್ನು ಹೋಗುತ್ತದೆ ಎನ್ನುವುದಕ್ಕೆ ಬೆಂಗಳೂರು ನಗರದಲ್ಲಿ ಚಾಕು ಇರಿತ, ಹೃದಯಘಾತದಂತ ಘಟನೆಗಳು ಮಂಗಳವಾರ ರಾತ್ರಿಯೇ ನಡೆದು ಹೋಗಿದ್ದು, ಇಲ್ಲಿ ಪೊಲೀಸರು



ಜನರ ರಕ್ಷಣೆಯಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ ಎನ್ನುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಕರ್ನಾಟಕ ಕ್ರಿಕೆಟ್ ಸಂಸ್ಥೆಯು ತರಾತುರಿಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ತಪ್ಪು ಆಗಿದೆ. ಅಲ್ಲದೇ ಅಭಿಮಾನಿಗಳನ್ನು ನಿಯಂತ್ರಿಸಲು ಸೂಕ್ತ ಪೊಲೀಸ ಬಂದೋಬಸ್ತ ವ್ಯವಸ್ಥೆ ಮಾಡದೇ ಇರುವುದು ಗೃಹಮಂತ್ರಿಗಳು ನೇರ ಹೊಣೆಯಾಗಿದ್ದಾರೆ. ಇನ್ನೂ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಸಚಿವರು ಶಾಸಕರು, ತಮ್ಮ ಕುಟುಂಬದ ಸದಸ್ಯರನ್ನು ಆರ್‌ಸಿಬಿ ತಂಡಕ್ಕೆ ಪರಿಚಯಿಸಿ ಸಂತೋಷ ಪಡುವುದರಲ್ಲಿಯೇ ಇದ್ದರು. ಆದರೆ ಸಾಮಾನ್ಯ ಜನರ ರಕ್ಷಣೆ ಮಾಡುವುದರಲ್ಲಿ ವಿಫಲವಾಗಿದ್ದಾರೆ ಎನ್ನವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಸಾಮನ್ಯ ಮಾಹಿತಿಯಂತೆ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು ತಮ್ಮ ಕರ್ತವ್ಯ ಮರೆತು ಆರ್‌ಸಿಬಿ ತಂಡದೊಂದಿಗೆ ಫೋಟೋ ತೆಗೆಸಿಕೊಳ್ಳುವುದಕ್ಕೆ ಮತ್ತು ಆಟಗಾರರನ್ನು ಕಣ್ತುಂಬಿಸಿಕೊಳ್ಳುವುದಕ್ಕೆ ಹೆಣಗಾಡಿದ್ದಾರೆ ಎಂಬ ಮಾಹಿತಿಗಳು ಪೊಲೀಸ್ ಇಲಾಖೆಯಲ್ಲಿ ಹಾರಿದಾಡುತ್ತಿವೆ.

ಅಮಾಯರಕ 11 ಜನರ ಬಲಿಗೆ ಹೊಣೆಯಾರು?

ಸುಮಾರ 18 ವರ್ಷಗಳ ಕಾಲ ಐಪಿಎಲ್ ಕ್ರಿಕೆಟ್ ಕಪ್ ಗೆಲ್ಲಲಿಲ್ಲ.

ಪ್ರತಿಬಾರಿಯು ಅಭಿಮಾನಿಗಳಿಂದ ಈ ಸಲ ಕಪ್ ನಮ್ದೇ ಎನ್ನುವ

ಉದ್ಘಾರ ಕೇಳಿ ಬರುತ್ತಿತ್ತು. ಇದು ಅಭಿಮಾನಿಗಳಿಗೆ ಆಟಗಾರರನ್ನು ನೋಡುವ ತವಕ ಹೆಚ್ಚಿಸಿತು ಎನ್ನಬೇಕು. ಇದರಿಂದಾಗಿ ಅತೀ ಹೆಚ್ಚು ಯುವಕರು, ಯುವತಿಯರು ಚಿನ್ನಸ್ವಾಮಿ ಕ್ರಿಡಾಂಗಣಕ್ಕೆ ಧಾವಿಸಿದರು. ಗೆಲವಿನ ದಿನದಂತೆ ಆದ ಘಟನೆಗಳನ್ನು ಅರಿತು. ಗೃಹಮಂತ್ರಿ ಡಾ. ಜಿ. ಪರಮೇಶ್ವರ ಹಾಗೂ ಪೊಲೀಸ್ ಇಲಾಖೆಯ ಉನ್ನತಾಧಿಕಾರಿಗಳು ಎಚ್ಚತ್ತು ಕೊಳ್ಳದೇ ಇರುವುದು ಈ ಘಟನೆಗೆ ಕಾರಣವಾಗಿದೆ. ಕೂಡಲೇ ಸಿಎಂ. ಸಿದ್ದರಾಮಯ್ಯ ಗೃಹಮಂತ್ರಿಗಳ ಬದಲಾಣೆಮಾಡಬೇಕು. ಡಾ. ಜಿ. ಪರಮೇಶ್ವರ ಅವರೇ ನೈತಿಕ ಹೊಣೆ ಹೊತ್ತು. ರಾಜೀನಾಮೆ ನೀಡಬೇಕು ಎಂದು ಬಿಜೆಪಿಯ ಓಬಿಸಿ ಮೋರ್ಚಾದ ನಗರಾಧ್ಯಕ್ಷ ದೇವಿಂದ್ರ ದೇಸಾಯಿ ಕಲ್ಲೂರ ಒತ್ತಾಯಿಸಿದ್ದಾರೆ.

# ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಸಗಿ ಡ್ರೋನ್ ಬಳಕೆ ನಿಷೇದ

**ಚಿಕ್ಕಮಗಳೂರು, ಜೂ.5–** ಜಿಲ್ಲೆಯಲ್ಲಿರುವ ಎಲ್ಲಾ ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ ಡ್ರೋಣಗಳನ್ನು ಬಳಸಬಾರದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆಯೊಂದನ್ನು ಬಿಡುಗಡೆ ಮಾಡಿರುವ ಅವರು, ಡ್ರೋಣ್ ಬಳಕೆಯನ್ನು ಪ್ರಮುಖವಾಗಿ ಸೂಕ್ಷ್ಮ ಸ್ಥಳಗಳು ಮತ್ತು ಪ್ರಮುಖ ಸ್ಥಾವರಗಳ ಸುತ್ತಮುತ್ತ ವಿಶೇಷವಾಗಿ ನಿರ್ಬಂಧಿಸಲಾಗಿದೆ.ಜಿಲ್ಲೆಯ ಎಲ್ಲ ಕೈಗಾರಿಕೆ, ವಾಣಿಜ್ಯ ಸಂಸ್ಥೆಗಳು, ಭದ್ರತೆ ಒದಗಿಸುವ ಎಲ್ಲಾ ಖಾಸಗಿ ಭದ್ರತಾ ಸಂಸ್ಥೆಗಳು, ಕಣ್ಗಾವಲು ಅಥವಾ ಇತರ ಉದ್ದೇಶಗಳಿಗಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಡ್ರೋಣ್‌ಗಳನ್ನು ಹಾರಿ ಬಿಡುವುದು, ಬಳಕೆ ಮಾಡಬಾರದೆಂದು ಅವರು ಹೇಳಿದ್ದಾರೆ.

ಭಾರತ, ಪಾಕ್ ಗಡಿಯಲ್ಲಿನ ಇತ್ತೀಚಿನ



ಬೆಳವಣಿಗೆಗಳ ಕುರಿತು ಮತ್ತು ಭದ್ರತಾ ಪಡೆಗಳ ಅನಿಯಂತ್ರಿತ ಮತ್ತು ಗುರುತಿಸಲಾಗದ ಡ್ರೋಣ್ ಚಟುವಟಿಕೆಯ ಬಗ್ಗೆ, ವಿಶೇಷವಾಗಿ ಸೂಕ್ಷ್ಮ ಮಿಲಿಟರಿ ಮತ್ತು ಪ್ರಮುಖ ಸ್ಥಾವರಗಳ ಬಳಿ (ಸಂಸ್ಕರಣಾಗಾರಗಳು, ಬಂದರುಗಳು, ವಿದ್ಯುತ್ ಸ್ಥಾವರಗಳು, ವಿಮಾನ ನಿಲ್ದಾಣಗಳು, ರೈಲು ನಿಲ್ದಾಣಗಳು, ತೈಲ ಡಂಪ್‌ಗಳು ಮತ್ತು ಸಾರ್ವಜನಿಕರ ಸ್ಥಾವರಗಳು) ಎದ್ದಿರುವ ಭದ್ರತಾ ಕಾಳಜಿಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಈ ಬಗ್ಗೆ ಮಾಹಿತಿ ನೀಡಿರುವುದಾಗಿ ರಾಜ್ಯದ ಗೃಹ ಇಲಾಖೆ (ಕಾನೂನು ಸುವ್ಯವಸ್ಥೆ) ಕಾರ್ಯದರ್ಶಿ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವುದಾಗಿ ಎಸ್‌ಪಿ ಮಾಹಿತಿ ನೀಡಿದ್ದಾರೆ.

# ಎನ್‌ಎಸ್‌ಬಿ ಹುಟ್ಟುಹಬ್ಬ ಅಂಗವಾಗಿ ಛತ್ರಿ ವಿತರಣೆ




ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.5–** ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಎನ್.ಎಸ್. ಬೋಸರಾಜು ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾಂಗ್ರೆಸ್ ಪಕ್ಷದ ಮುಖಂಡರು ಸಚಿವರ ಜನ್ಮದಿನದ ಪ್ರಯುಕ್ತ ಬೀದಿಬದಿ ವ್ಯಾಪಾರಿಗಳಿಗೆ ಛತ್ರಿಗಳನ್ನು ವಿತರಿಸುವ ಮೂಲಕ ದುಡಿಯುವ ವರ್ಗಕ್ಕೆ ನೆರಳು ನೀಡುವ ಕಾರ್ಯವನ್ನು ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆಯ ಉಪಾಧ್ಯಕ್ಷರಾದ ಡಿ. ರಾಮಕೃಷ್ಣ, ಹುಸೇನ್ ಭಾಷಾ ಕೊಡಲಿ, ಸುಭಾಷ್ ಚಂದ್ರ ನಾಯಕ್, ಸಾಬಿರ್ ಪಾಷಾ, ನಾಗೇಶ್ ಕಬ್ಬೇರ್, ಜಿಲ್ಲಾನೀ ಖುರೇಶಿ, ರೇವಣ್ಣ ಸಿದ್ದಯ್ಯ ಸ್ವಾಮಿ, ಜಯಪ್ರಕಾಶ್, ಹೆಚ್.ಬಿ.ಎಂ. ಬಾಷಾ, ಎಸ್. ಫಯಾಜೋದ್ದೀನ್, ಹಿದಾಯತ ನಾಯ್ಕು, ರಸುಲ್ ಖುರೇಶಿ, ಕನಕಪ್ಪ ಯಾದವ್, ಶಂಕರ್ ಜಗಲಿ, ಶೇಕ್ ಮುಕ್ತರ್, ವಿರುಪಾಕ್ಷಿ ನಾಯಕ್, ಕಾಮೇಶ್ ಮುಂತಾದ ಕಾಂಗ್ರೆಸ್ ಪಕ್ಷದ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

# ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಮರೆಯಬಾರದು



ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.5–**ಕೇವಲ ಜೂನ್ 5 ರಂದು ಮಾತ್ರ ಪರಿಸರ ಬಗೆಗಿನ ಕಾಳಜಿ ತೋರಿಸಿ, ಇಡೀ ವರ್ಷ ಪರಿಸರವನ್ನು ಹಾಳು ಮಾಡುವುದರಲ್ಲಿ ತೊಡಗಬಾರದು. ಪರಿಸರ ಸಂರಕ್ಷಣೆಯು ನಮ್ಮ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯನ್ನು ನಾವು ಎಂದೂ ಮರೆಯಬಾರದು. ಪರಿಸರವೆಂದರೆ ಗಿಡಮರಗಳು, ನದಿಬೆಟ್ಟಗಳಷ್ಟೇ ಅಲ್ಲ, ಅದರ ಜೊತೆಗೆ ಈ ಭೂಮಿ ಮೇಲೆ ವಾಸ ಮಾಡುವ ಎಲ್ಲಾ ವಸ್ತುಗಳು, ಪ್ರಾಣಿ ಹಾಗೂ ವ್ಯಕ್ತಿಗಳು ಸಹ ಸೇರಿದ್ದಾರೆ. ಎಲ್ಲರೊಂದಿಗೆ ನಾವು ಅನ್ಯೋನ್ಯವಾಗಿರಬೇಕು" ಎಂದು ಪ್ರಾಚಾರ್ಯರಾದ ಎಸ್.ಎಸ್.ಪಾಟೀಲ್ ರವರು ಹೇಳಿದರು.

ಗುರುವಾರ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಕಲ್ಮಠ ಪಿ.ಯು. ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಈ ಕಾರ್ಯಕ್ರಮ ಮುಖ್ಯ ಅತಿಥಿಯಾಗಿ ಮಾತನಾಡಿದ ರಮೇಶ ಬಾಬು ಯಾಳಗಿಯವರು " ಪರಿಸರ ಹಾಳು ಮಾಡುತ್ತಿರುವ ಮನಸುಗಳು ಮಲಿನವಾಗಿವೆ, ಮೊದಲು ಆ ಮನಸುಗಳನ್ನು ಶುದ್ಧಗೊಳಸಿದರೆ, ಪರಿಸರ ತನ್ನಿಂದ ತಾನೇ ಶುದ್ಧವಾಗುತ್ತದೆ. ಇಲ್ಲದಿದ್ದರೆ ಮಾಡಿದ್ದುಣ್ಣೋ ಮಾರಾಯ" ಎಂದು ಹಾಡಿನ ಮೂಲಕ ಸಂದೇಶ ರವಾನಿಸಿದರು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಭೌತಶಾಸ್ತ್ರ ಉಪನ್ಯಾಸಕರಾದ ಮಲ್ಲಿಕಾರ್ಜುನ ಗಡ್ಡಿಮಠ ಮಾತನಾಡುತ್ತಾ "ಪರಿಸರದಿಂದಲೇ ನಾವು ನೀವು. ಪರಿಸರವನ್ನು ನಾವು ಪ್ಲಾಸ್ಟಿಕ್ ಮುಕ್ತಗೊಳಿಸಬೇಕಿದೆ. 2025ರ ವಿಶ್ವ ಪರಿಸರ ದಿನಾಚರಣೆಯ ಧ್ಯೇಯವಾಕ್ಯವೂ ಇದೇ ಆಗಿದೆ. ಪ್ಲಾಸ್ಟಿಕ್ ಉತ್ಪಾದನೆ ಹಾಗೂ ಬಳಕೆಯಿಂದ ಪರಿಸರಕ್ಕೆ ಸಾಕಷ್ಟು ಹಾನಿಯಾಗುತ್ತಿದೆ. ದೇಹದಲ್ಲಿ ಅಸಹಜ ಹಾರ್ಮೋನುಗಳ ಬೆಳವಣಿಗೆ, ಕ್ಯಾನ್ಸರ್ ರೋಗಿಗಳು, ಸಂತಾನಹೀನತೆ, ಹೀಗೆ ಮುಂತಾದ ಕೆಟ್ಟ ಪರಿಣಾಮಗಳು ನಮ್ಮ ಮೇಲೆ ಹಾಗೂ ನಮ್ಮ ಪರಿಸರದ ಮೇಲಾಗುತಿವೆ ಎಂದರು.

ವಿದ್ಯಾರ್ಥಿ ಗವಿರಾಜ್ ಅನಿಸಿಕೆ ವ್ಯಕ್ತಪಡಿಸಿದರೆ ಕುಮಾರಿ ಬಸವರಾಜೇಶ್ವರಿ ಪ್ರಾರ್ಥಿಸಿದಳು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಕುಮಾರಿ ದುರ್ಗಾ, ಎನ್.ಎಸ್. ಎಸ್. ಯೋಜನಾಧಿಕಾರಿ ನರಸಣ್ಣ ಸುಂಕೇಶ್ವರ, ಆಂಗ್ಲ ಉಪನ್ಯಾಸಕ ಉಮರ್ ದೇವರಮನೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111, 9743496111

# ವಿಶ್ವ ಪರಿಸರ ದಿನಾಚರಣೆ: ಪ್ಲಾಸ್ಟಿಕ್ ಮುಕ್ತ ಪರಿಸರಕ್ಕೆ ಸಂಕಲ್ಪ

ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.5–** ವಿಶ್ವ ಪರಿಸರ ದಿನಾಚರಣೆಯನ್ನು ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಮತ್ತು ಲಿವಿಂಗ್ ಸ್ಟೋನ್ ಸಂಸ್ಥೆಗಳ ಸಹಯೋಗದಲ್ಲಿ ರಾಯಚೂರಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. "ಪ್ಲಾಸ್ಟಿಕ್ ಮುಕ್ತ ಪರಿಸರ" ಎಂಬ ಧ್ಯೇಯದೊಂದಿಗೆ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಎಸ್‌ವಿವೈಎಂ ಸಂಸ್ಥಾಪಕ ಸುರೇಶ್ ಅವರು, "ಈ ವರ್ಷದ ಪರಿಸರ ದಿನವನ್ನು ಪ್ಲಾಸ್ಟಿಕ್ ಮುಕ್ತ ಪರಿಸರ ದಿನವನ್ನಾಗಿ ಆಚರಿಸುತ್ತಿದ್ದೇವೆ. ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗಲು ನೂರಾರು ವರ್ಷಗಳು ಬೇಕಾಗುತ್ತವೆ. ಇದರಿಂದಾಗಿ ಹಲವು ಪ್ರಾಣಿಗಳು ಸಾವನ್ನಪ್ಪುತ್ತಿವೆ.



ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸುವ ಪ್ರತಿಜ್ಞೆ ಮಾಡೋಣ. ಬಳಸಿದ ಪ್ಲಾಸ್ಟಿಕ್ ಬಾಟಲಿಗಳನ್ನು ಡಸ್ಟ್ ಬಿನ್‌ಗೆ ಹಾಕಿ ಪರಿಸರ ಸಂರಕ್ಷಣೆಯಲ್ಲಿ ಭಾಗಿಯಾಗಬೇಕು," ಎಂದು ಕರೆ ನೀಡಿದರು. ಬೆಳಿಗ್ಗೆ ಹಾಲು ತರುವಾಗಿನಿಂದ ರಾತ್ರಿ ತರಕಾರಿ ತರುವವರೆಗೂ ಪ್ಲಾಸ್ಟಿಕ್ ಚೀಲಗಳ ಬಳಕೆ ನಿಲ್ಲಬೇಕು, ಆಗ ಮಾತ್ರ ಪರಿಸರ ದಿನಾಚರಣೆಗೆ ಅರ್ಥ ಬರುತ್ತದೆ ಎಂದು ಅವರು ಹೇಳಿದರು.

ನಗರ ಮಹಾತ್ಮಾ ಗಾಂಧಿ ಕ್ರೀಡಾಂಗಣದ ಆವರಣದಲ್ಲಿ ಯುವಜನ ಕ್ರೀಡಾ ಇಲಾಖೆಯ ಉಪ ನಿರ್ದೇಶಕರಾದ ವೀರೇಶ್ ನಾಯಕ್ ಅವರು ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. "ಸ್ವಾಮಿ ವಿವೇಕಾನಂದ ಸಂಸ್ಥೆಯ ಮತ್ತು ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇಂದು ನಮ್ಮ ಕ್ರೀಡಾ ಆವರಣದಲ್ಲಿ ಮಹಿಳಾ ಹಾಸ್ಟೆಲ್ ಸುತ್ತ ಪ್ಲಾಸ್ಟಿಕ್ ಸಂಗ್ರಹಿಸಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ. ಪರಿಸರ ಸಂರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸುತ್ತದೆ," ಎಂದರು. ಮರಗಳನ್ನು ಬೆಳೆಸುವುದರ ಜೊತೆಗೆ, ಇರುವ ಮರಗಳನ್ನು ಸಂರಕ್ಷಿಸುವುದು ಸಹ ಮುಖ್ಯ. ಮರ ಕಡಿಯುವುದನ್ನು ನಿಲ್ಲಿಸಬೇಕು. ಇಂತಹ ಸಮಾಜಮುಖಿ ಕಾರ್ಯಗಳು ಕೇವಲ ಸಂಘ ಸಂಸ್ಥೆಗಳು ಅಥವಾ ಇಲಾಖೆಗಳಿಗೆ ಸೀಮಿತವಾಗದೆ, ಇಡೀ ಮಾನವ ಕುಲವೇ ಪರಿಸರ ಸಂರಕ್ಷಣೆಗೆ ಪಣ ತೊಡಬೇಕು ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕ್ರೀಡಾ ಇಲಾಖೆಯ ಅಧೀಕ್ಷಕ ಸಂತೋಷ್ ಕುಮಾರ್, ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಮಾಜ ಸೇವಾ ಕಾರ್ಯ ವಿದ್ಯಾರ್ಥಿಗಳಾದ ಹನುಮೇಶ್, ನವೀನ್, ವಿನೋದ್, ಪೂಜಾ ಹಿರೇಮಠ್, ಸಂಸ್ಥೆಯ ಸಂಯೋಜಕರಾದ ಮಮತಾ, ಹನುಮಂತು, ವಿನಾಯಕ ಆರ್. ಸಿಬ್ಬಂದಿಗಳಾದ ಲಿಂಗಪ್ಪ, ಭೀಮಯ್ಯ, ರಾಜೇಶ್, ಈರಣ್ಣ, ನಯನಾ, ರೇಣುಕಾ, ಈರಮ್ಮ, ಮಾಲಾ ಸಿಂಧನೂರು ಮತ್ತು ಶಂಕರ ಉಪಸ್ಥಿತರಿದ್ದರು.

# ಆರೋಗ್ಯ ಇಲಾಖೆ ವತಿಯಿಂದ ಡೆಂಗಿ ವಿರೋಧಿ ಮಾಸಾಚರಣೆ

ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.5–**ಪೋತ್ನಾಳ್ ಗ್ರಾಮದಲ್ಲಿನ ಸೇಂಟ್ ಝಕಾರಿಯಾ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ಪೋತ್ನಾಳ್ ಸರ್ಕಾರಿ ಆಸ್ಪತ್ರೆ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಡೆಂಗಿ ವಿರೋಧಿ ಮಾಸಾಚರಣೆ ಅಂಗವಾಗಿ ನಡೆದ ವಿದ್ಯಾರ್ಥಿಗಳಿಗೆ ಡೆಂಗಿ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಸ್ಪತ್ರೆಯ ವೈದ್ಯಾಧಿಕಾರಿ ಗುರುನಾಥ ರೆಡ್ಡಿ ಮಾತನಾಡಿ, ಸೊಳ್ಳೆಗಳಿಂದ ಚಿಕನ್ ಗ್ಯೂನ್ ಜ್ವರ,ಮಲೇರಿಯಾ ಸೇರಿ ಹಲವು ಸಾಂಕ್ರಾಮಿಕ ಕಾಯಿಲೆಗಳು ಹರಡುತ್ತವೆ. ಈಡೀಸ್ ಸೊಳ್ಳೆಗಳಿಂದ ಡೆಂಗ್ಯೂ ಜ್ವರ ಹರಡುತ್ತದೆ ಮಳೆಗಾಲದಲ್ಲಿ ನೀರಿನ ಶೇಖರಣೆ ಮಾಡಿದ ತೊಟ್ಟಿಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಲಾರ್ವ ಹಂತದಲ್ಲಿ ಸೊಳ್ಳೆಗಳನ್ನು ನಾಶ



ಪಡಿಸುವುದರಿಂದ ಸೊಳ್ಳೆಗಳಿಂದ ಹರಡಬಹುದಾದ ಹಲವು ಕಾಯಿಲೆಗಳನ್ನು ತಡೆಗಟ್ಟಬಹುದು. ಶಾಲೆ ಮತ್ತು ಮನೆಯ ಪರಿಸರದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಸೊಳ್ಳೆ ಪರದೆ ಮತ್ತು ಸೊಳ್ಳೆಗಳ ನಿಯಂತ್ರಣ ವಿಧಾನಗಳನ್ನು ಅನುಸರಿಸಬೇಕು ಶಾಲೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ನೋಡಲ್ ಶಿಕ್ಷಕರನ್ನು ನೇಮಕ ಮಾಡಬೇಕು ಹಾಗೂ ಆರೋಗ್ಯ ಸಂಬಂಧಿಸಿದಂತೆ ಶಾಲಾ ಸಂಸತ್ತಿನಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ವಿಷಯ ಚರ್ಚೆ ಮಾಡಲು ಆರೋಗ್ಯ ಮಂತ್ರಿ ನೇಮಕ ಮಾಡಬೇಕು ಇದರಿಂದ ಶಾಲೆಗಳಲ್ಲಿ ಮನೆಗ ಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಮಾತನಾಡಿ, ಡೆಂಗ್ಯೂ ಜ್ವರದ ಲಕ್ಷಣಗಳಾದ ತಲೆನೋವು ವಾಂತಿ, ಕಣ್ಣಿನ ಹಿಂಬಾಗದ ನೋವು ಅತಿಯಾದ ಜ್ವರ ಕಂಡು ಬಂದಾಗ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ರಕ್ತಪರೀಕ್ಷೆ ಮಾಡಿಸಿಕೊಂಡು ಪ್ರಾರಂಭಿಕ ಹಂತದಲ್ಲಿಯೇ ಅಗತ್ಯ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು.

ಶಾಲೆಯ ಮುಖ್ಯ ಗುರು ಬಸವರಾಜ ನಾಗವಲಿಕರ್ , ದೈಹಿಕ ಶಿಕ್ಷಕರಾದ ಅಮರೇಶ ,ಆರೋಗ್ಯ ಇಲಾಖೆಯ , ಶರಣಪ್ಪ, ದೇವೀಂದ್ರಪ್ಪ , ಗುರು ಶರಣ ಇದ್ದರು.

# ಪರಿಸರವನ್ನು ಸಂರಕ್ಷಿಸಿದಲ್ಲಿ ಮಾತ್ರ ಮಾನವರು ಉಳಿಯುವುದಕ್ಕೆ ಸಾಧ್ಯ: ರವಿಕುಮಾರ ನಾಡಗೌಡ

ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.5–** ತಾಲೂಕಿನ ಜಿನ್ನೂರು ಗ್ರಾಮದಲ್ಲಿ ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ಮತ್ತು ಆಯುಷ್ಮಾನ್ ಆರೋಗ್ಯ ಮಂದಿರ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜೀನೂರು ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಚಾಲನೆ ನೀಡಿ ಗ್ರಾಮದ ಮುಖಂಡರಾದ ರವಿಕುಮಾರ ನಾಡಗೌಡ ಮಾತನಾಡಿ,ಪರಿಸರವನ್ನು ಸಂರಕ್ಷಿಸಿದಲ್ಲಿ ಮಾತ್ರ ಮಾನವರು ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದ್ದರಿಂದ ಪ್ರತಿಯೊಬ್ಬರಲ್ಲು ಕೂಡ ಪರಿಸರವನ್ನು ಉಳಿಸುವ ಜಾಗೃತಿಯನ್ನು ಮೂಡಿಸುವ ಮೂಲಕ ನಮ್ಮ ಹೊಲಗದ್ದೆಗಳಲ್ಲಿ ಮತ್ತು



ಮನೆಯ ಸುತ್ತಮುತ್ತ ಸಸಿಗಳನ್ನು ನೆಟ್ಟು ಪರಿಸರದ ಬಗ್ಗೆ ಕಾಳಜಿ ವಹಿಸೋಣ ಎಂದು ತಿಳಿಸಿದರು. ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ಸದಸ್ಯರಾದ ಚಾರ್ಲಿ ಉದ್ಬಾಳ ಮಾತನಾಡಿ ಮಾನವ ಸೇರಿದಂತೆ ಇತರೆ ಪ್ರಾಣಿಗಳು ಪಕ್ಷಿಗಳು ಸೇರಿದಂತೆ ಪ್ರತಿಯೊಂದು ಜೀವಸಂಕುಲ ಆಹಾರ ಗಾಳಿ ನೀರು ಇತರೆ ಅಗತ್ಯತೆಗಳಿಗಾಗಿ ಪರಿಸರವನ್ನು ಅವಲಂಬಿಸಿರುವುದರಿಂದ ಪರಿಸರವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಜೀನೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರ,ಶಾಲೆಯ ಆವರಣ,ಗ್ರಾಮದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ವಿವಿಧ ಜಾತಿಯ ಮರಗಳನ್ನು ನೆಡಲಾಯಿತು.

ಆರೋಗ್ಯ ಇಲಾಖೆಯ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ,ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ದೇವೇಂದ್ರಪ್ಪ, ಸಮುದಾಯ ಆರೋಗ್ಯ ಅಧಿಕಾರಿ ಸೋನಾಲಿ ,ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಮಂಜುಳಾ ಶಿಕ್ಷಕರಾದ ಅಶೋಕ. ಶಿವಲೀಲಾ.ಶಾಂಭವಿ. ಸುಜಾತ. ಶರಣಬಸವ. ಆಶಾ ಕಾರ್ಯಕರ್ತರು. ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.

# ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಎಂ.ನಾಗರಾಜ ಅವಿರೋಧ ಆಯ್ಕೆ




ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.5–**ಪಟ್ಟಣದ ಮಾನ್ವಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಮಾನ್ವಿ ಲಯನ್ಸ್ ಕ್ಲಬ್ ಸಭೆಯಲ್ಲಿ 2025-26 ನೇ ಸಾಲಿಗೆ ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ ನಡೆಯಿತು.

ಮಾನ್ವಿ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಎಂ.ನಾಗರಾಜ, ಉಪಾಧ್ಯಕ್ಷರಾಗಿ ರಾಮಲಿಂಗಪ್ಪ.ಎಂ,ಈರಣ್ಣ ಮರ್ಲಟ್ಟಿ, ಕಾರ್ಯದರ್ಶಿಯಾಗಿ ಶಾಂತಮೂರ್ತಿ ಬಾವಿಕಟ್ಟೆ, ಖಜಾಂಚಿ ಪಿ.ರಾಮರಾಜ, ಕ್ಲಬ್ ಆಢಳಿತಾಧಿಕಾರಿ, ಡಾ.ಅಶ್ವನಿಕಾಂತ, ಕ್ಲಬ್ ಮಾರ್ಕೆಟಿಂಗ್ ಶಂಭುಲಿಂಗಯ್ಯಸ್ವಾಮಿ ಹಿರೇಮಠ ಆಯ್ಕೆಯಾದರು

# ಶಾಲಾ ಮಕ್ಕಳಿಂದ ಪರಿಸರ ದಿನಾಚರಣೆ



ಯುವ ಮಾರ್ಗ ಸುದ್ದಿ

**ದೇವದುರ್ಗ,ಜೂ.5–**ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರೆಹಮಾನಿಯಾ ಶಾಲೆಯ ಮಕ್ಕಳು ಪರಿಸರದ ಬಗ್ಗೆ ತಮ್ಮ ಕಾಳಜಿಯನ್ನು ಪ್ರದರ್ಶಿಸಿದ್ದಾರೆ. ಪ್ರಾಕೃತಿಕ ಸೌಂದರ್ಯ ಹೆಚ್ಚಿದರೆ ಮಾನವ ಸಂಕುಲ ಉಳಿಯುತ್ತದೆ ಎಂಬ ಮಹತ್ವವನ್ನು ಅರಿತ ಈ ವಿದ್ಯಾರ್ಥಿಗಳು, ಶಾಲಾ ಆವರಣವನ್ನು ಸ್ವಚ್ಛಗೊಳಿಸಿ ಸಸಿಗಳನ್ನು ನೆಡುವ ಮೂಲಕ ಸಮಾಜಕ್ಕೆ ಮಾದರಿಯಾದರು.

ಇಂದಿನ ಮಕ್ಕಳು ಭವಿಷ್ಯದ ಜೊತೆಗೆ ವಾಸ್ತವದ ನೆಲೆಯಲ್ಲಿ ಜೀವಿಸುವ ಈ ಪರಿಸರ ಕಾಳಜಿ ನಿಜಕ್ಕೂ ಶ್ಲಾಘನೀಯ. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ನಬಿಲಾಲ್ ಮತ್ತು ಜರಿನಾ ಬೇಗಂ ಅವರು ಸಸಿ ನೆಟ್ಟು ನೀರೆರೆಯುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿಜ್ಞಾನ ಶಿಕ್ಷಕಿ ಅಖಿಲಾ ಬೇಗಂ, ಸಿಮ್ರಾನ್, ಪೂಜಾ ಹಾಗೂ ಇತರ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು. ಮಕ್ಕಳ ಈ ಸ್ವಯಂ ಪ್ರೇರಿತ ಕಾರ್ಯವು ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದೆ.

# ರುದ್ರಭೂಮಿಗೆ ಮೂಲ ಸೌಕರ್ಯ ಒದಗಿಸಲು ಒತ್ತಾಯ



**ಕಲಬುರಗಿ,ಜೂ.5–**ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 42ರಲ್ಲಿ ಬರುವ ಹೀರಾಪುರ ಬಡಾವಣೆಯ ಪರಿಶಿಷ್ಟ ಜಾತಿ (ಎಸಿ) ಜನಾಂಗದ ರುದ್ರಭೂಮಿಯಲ್ಲಿ ಒಂದು ಬೋರವೆಲ್ ಇದ್ದು, ಅದಕ್ಕೆ ಸಾಕಷ್ಟು ನೀರು ಇರುವುದರಿಂದ ಮೋಟಾರ್ ಅಳವಡಿಸಿ ಒಂದು ಗುಮ್ಮಿ ಕೂಡಿಸುವುದರ ಮೂಲಕ ಸಾರ್ವಜನಿಕರಿಗೆ ನೀರಿನ ಅನುಕೂಲ ಮಾಡಿಕೊಡಬೇಕು ಎಂದು ಬಡಾವೆಯ ಪರಿಶಿಷ್ಟ ಜಾತಿ ಜನಾಂಗ ಜೀರ್ಣೋದ್ಧಾರ ಟ್ರಸ್ಟ್ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಮಾಡಿದೆ.

ಈ ಮನವಿ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಶಿಂಧೆ ಅವಿನಾಶ ಸಂಜೀವನ್ ಅವರು ಸ್ವತ: ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ಶಿವಕುಮಾರ ಮದ್ರಿ, ಉಪಾಧ್ಯಕ್ಷ ರಾಣೋಜಿ ಡೆಪ್ಯೂಟಿ ಅವರು ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿ ರುದ್ರಭೂಮಿಯಲ್ಲಿರುವ ಬೋರವೆಲ್‌ಗೆ ಮೋಟಾರ್ ಅಳವಡಿಸಿ ಗುಮ್ಮಿ ಕೂಡಿಸಬೇಕು ಮತ್ತು ಅರ್ಧಕ್ಕೆ ನಿಂತಿರುವ ರುದ್ರಭೂಮಿಯ ಕಾಂಪೌಂಡ್‌ನ್ನು ಪೂರ್ಣಗೊಳಿಸಬೇಕು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**